# ಕರ್ನಾಟಕ ವಿಧಾನ ಪರಿಷತ್ತು

(4)

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಎಂ.ಎ ಗೋಪಾಲಸ್ವಾಮಿ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **169** |
| ಉತ್ತರಿಸಬೇಕಾದ ದಿನಾಂಕ | : | **14.12.2021** |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಸದಸ್ಯತ್ವ ಪಡೆಯಲು ಮತ್ತು ಸದಸ್ಯತ್ವ ಹೊಂದಿರುವ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನಿಂದ ಸಾಲ ವಿತರಿಸಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು? (ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ಬೈಲಾ ಮತ್ತು ಆದೇಶಗಳ ಸಹಿತ ವಿವರ ನೀಡುವುದು) | ಬ್ಯಾಂಕಿನಲ್ಲಿ ಸದಸ್ಯತ್ವ ಪಡೆಯಲು ಇಚ್ಛಿಸುವ ಸಹಕಾರ ಸಂಘಗಳು ಮೊದಲು ಬ್ಯಾಂಕಿನ ಸದಸ್ಯತ್ವ ಕೋರುವ ನಿಗದಿತ ಅರ್ಜಿ ನಮೂನೆ ಪಡೆಯಲು ಲಿಖಿತ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಸದರಿ ಅರ್ಜಿಯ ಮೇಲೆ ಆಡಳಿತ ಮಂಡಳಿ ಸಭೆಗೆ ವಿಷಯ ಮಂಡಿಸಿ ನಂತರ ಸದಸ್ಯತ್ವ ನೀಡುವ / ನೀಡದಿರುವ ಬಗ್ಗೆ ಸಭೆಯಲ್ಲಿ ತೀರ್ಮಾನವಾದ ನಂತರ, ಸದಸ್ಯತ್ವ ನೀಡಲು ತೀರ್ಮಾನವಾದಲ್ಲಿ ಬ್ಯಾಂಕಿನಿಂದ ನಿಗದಿತ ಅರ್ಜಿ ನಮೂನೆಯನ್ನು ಸದರಿ ಸಂಘಕ್ಕೆ ನೀಡಿ, ಅಗತ್ಯ ದಾಖಲಾತಿಗಳನ್ನು ಪಡೆದು ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಿ ನಂತರ ಬ್ಯಾಂಕಿನ ಸದಸ್ಯತ್ವವನ್ನು ನೀಡಲಾಗುತ್ತಿರುತ್ತದೆ.<br><br>ಈ ರೀತಿ "ಬಿ" ವರ್ಗದ ಸದಸ್ಯತ್ವ ಪಡೆದ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರುಗಳಿಗೆ ಬ್ಯಾಂಕಿನಿಂದ ಸಾಲ ವಿತರಿಸಲಾಗುತ್ತಿರುತ್ತದೆ. ಕೃಷಿ ಪತ್ತಿನ ಸಹಕಾರ ಸಂಘದ ವ್ಯಾಪ್ತಿಯಲ್ಲಿ ವಾಸವಿರುವ ರೈತರಿಗೆ, ಆ ಸಂಘವು ಸದಸ್ಯತ್ವ ನೀಡಿ, ಕೃಷಿ ಜಮೀನು ಹೊಂದಿರುವ ರೈತರಿಗೆ ಕೃಷಿ ಜಮೀನನ್ನು ಸಂಘದ ಹೆಸರಿಗೆ ಋಣ ದಾಖಲಿಸಿಕೊಂಡು, ಕೃಷಿ ಜಮೀನಿನ ವಿಸ್ತೀರ್ಣ ಹಾಗೂ ರೈತರು ಬೆಳೆಯುವ ಬೆಳೆಗಳಿಗೆ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯು ನಿಗದಿಪಡಿಸುವ ಸ್ಕೇಲ್ ಆಫ್ ಫೈನಾನ್ಸ್ ರೀತ್ಯಾ ಶೂನ್ಯ ಬಡ್ಡಿದರದಲ್ಲಿ ಗರಿಷ್ಠ ರೂ. 3.00 ಲಕ್ಷಗಳವರೆಗೆ ಅಲ್ಪಾವಧಿ ಸಾಲವನ್ನು ಹಾಗೂ ಇತರೆ ಕೃಷಿ ಅಭಿವೃದ್ಧಿಗಾಗಿ ಶೇ.3 ರ ಬಡ್ಡಿ ದರದಲ್ಲಿ ಗರಿಷ್ಟ ರೂ. 10.00 ಲಕ್ಷಗಳವರೆಗೆ ಮಧ್ಯಮಾವಧಿ / ದೀರ್ಘಾವಧಿ ಸಾಲಗಳನ್ನು ವಿತರಿಸಲಾಗುತ್ತದೆ ಹಾಗೂ ಸಹಕಾರ ಸಂಘಗಳ ಆರ್ಥಿಕ ಚಟುವಟಿಕೆ/ವ್ಯಾಪಾರ ಅಭಿವೃದ್ದಿಗಾಗಿ ನಗದು ಪತ್ತಿನ ಸಾಲವನ್ನು ವಿತರಿಸಲಾಗುತ್ತದೆ. |

| | | |
| --- | --- | --- |
| ಆ) | ಚನ್ನರಾಯಪಟ್ಟಣ ತಾಲ್ಲೂಕಿನ ಅರೆಸೋಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ, ಜಂಬೂರು ಕೃಷಿ ಪತ್ತಿನ ಸಹಕಾರ ಸಂಘ. ಮೂಡನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ ಈ 3 ಸಂಘಗಳು ಒಂದೇ ತಿಂಗಳಿನಲ್ಲಿ ನೋಂದಣಿಯಾಗಿದ್ದು, ಈ ಸಂಘಗಳು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತದ ಸದಸ್ಯತ್ವವನ್ನು ಕೋರಿ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಇ) | ಬಂದಿದ್ದಲ್ಲಿ, ಅರೆಸೋಮನಹಳ್ಳಿ ಮತ್ತು ಮೂಡನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹಾಸನ ಜಿಲ್ಲಾ ಕೇಂದ್ರ ಬ್ಯಾಂಕ್ ನಿಯಮಿತದಲ್ಲಿ ಸದಸ್ಯತ್ವವನ್ನು ನೀಡದಂತೆ ಕ್ರಮವಾಗಿ ಕಲ್ಕೆರೆ ಮತ್ತು ಬಾಗೂರು ಕೃಷಿ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸದಸ್ಯರು ವಿರೋಧ ವ್ಯಕ್ತಪಡಿಸಿದ್ದು, ಈ ಬಗ್ಗೆ ಸಹಕಾರ ಇಲಾಖೆಗೆ ದೂರುಗಳನ್ನು ನೀಡಿದ್ದರೂ ಸಹ, ಸಹಕಾರಿ ಕಾನೂನುಗಳನ್ನು ಮೀರಿ ಈ ಎರಡು ಸಂಘಗಳಿಗೆ ಡಿಸಿಸಿ ಬ್ಯಾಂಕ್‌ನ ಸದಸ್ಯತ್ವ ನೀಡಿರುವುದಲ್ಲದೆ ಸಾಲ ಸೌಲಭ್ಯಗಳನ್ನು ಸಹ ಒದಗಿಸಿರುವುದಕ್ಕೆ ಹಾಸನ ಜಿಲ್ಲಾ ಕೇಂದ್ರ ಬ್ಯಾಂಕ್ ನಿಯಮಿತದ ಆಡಳಿತ ಮಂಡಳಿ ವಿರುದ್ಧ ಸರ್ಕಾರ ಶಿಸ್ತು ಕ್ರಮ ವಹಿಸುವುದೇ; (ವಿವರ ನೀಡುವುದು) | ಅರೆ ಸೋಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘವು, ಬ್ಯಾಂಕಿನ ಸದಸ್ಯತ್ವದ ನಿಗದಿತ ಅರ್ಜಿ ನಮೂನೆಯನ್ನು ನೀಡುವಂತೆ ಕೋರಿ ದಿನಾಂಕ: 01-01-2021 ರಂದು ಲಿಖಿತ ಅರ್ಜಿ ಸಲ್ಲಿಸಿದ್ದರು. ಸದರಿ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ನೀಡುವ ಅರ್ಜಿ ನಮೂನೆಯನ್ನು ನೀಡುವ ಬಗ್ಗೆ ವಿಷಯವನ್ನು ದಿನಾಂಕ:29-01-2021 ರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ, ಸದರಿ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವದ ನಿಗದಿತ ಅರ್ಜಿ ನಮೂನೆಯನ್ನು ನೀಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಸದರಿ ಸಂಘಕ್ಕೆ ನಿಗದಿತ ಅರ್ಜಿ ನಮೂನೆಯನ್ನು ನೀಡಿ, ಅಗತ್ಯ ದಾಖಲಾತಿಗಳನ್ನು ಹಾಗೂ ಷೇರು ಧನ ಮತ್ತು ಷೇರು ಫೀ ರೂ. 10,100/-ಗಳ ಚೆಕ್‌ನ್ನು ಪಡೆದು ದಿನಾಂಕ:18-03-2021 ರ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿ, ಸದರಿ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವವನ್ನು ನೀಡಲು ಒಪ್ಪಿ ತೀರ್ಮಾನಿಸಲಾಗಿರುತ್ತದೆ.<br><br>ಕಲ್ಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 04 ಜನ ನಿರ್ದೇಶಕರುಗಳು ಹಾಗೂ ಇತರರು, ಅವರ ಗ್ರಾಮಗಳನ್ನು ಕಲ್ಕರೆ ಕೃಷಿ ಪತ್ತಿನ ಸಹಕಾರ ಸಂಘದಲ್ಲಿಯೇ ಮುಂದುವರೆಸಬೇಕು ಹಾಗೂ ಅರೆಸೋಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ನೀಡಬಾರದು ಎಂದು ದಿನಾಂಕ:15-04-2021 ರಂದು ಬ್ಯಾಂಕಿಗೆ ಪತ್ರ ಬರೆದಿರುತ್ತಾರೆ. ಸದರಿ ಪತ್ರ, ಅರೆಸೋಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನೋಂದಣಿ ಪ್ರತಿ ಹಾಗೂ ಇತರೇ ದಾಖಲಾತಿಗಳನ್ನು ಪರಿಶೀಲಿಸಿ, ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ನಿಯಮಾನುಸಾರ ಸದಸ್ಯತ್ವವನ್ನು ನೀಡಿದ ನಂತರ ಬ್ಯಾಂಕಿಗೆ ನೀಡಲಾಗಿರುತ್ತದೆ. |

| | | |
|---|---|---|
| | | ಮೂಡನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘವು, ಬ್ಯಾಂಕಿನ ಸದಸ್ಯತ್ವದ ನಿಗದಿತ ಅರ್ಜಿ ನಮೂನೆಯನ್ನು ನೀಡುವಂತೆ ಕೋರಿ ದಿನಾಂಕ:28–01–2021 ರಂದು ಲಿಖಿತ ಅರ್ಜಿ ಸಲ್ಲಿಸಿದ್ದರು. ಸದರಿ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ನೀಡುವ ಅರ್ಜಿ ನಮೂನೆಯನ್ನು ನೀಡುವ ಬಗ್ಗೆ ವಿಷಯವನ್ನು ದಿನಾಂಕ:18–03–2021 ರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ, ಸದರಿ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವದ ನಿಗದಿತ ಅರ್ಜಿ ನಮೂನೆಯನ್ನು ನೀಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಸದರಿ ಸಂಘಕ್ಕೆ ನಿಗದಿತ ಅರ್ಜಿ ನಮೂನೆಯನ್ನು ನೀಡಿ, ಸಂಘದ ನೋಂದಣಿ ಪತ್ರ, ಷೇರು ಧನ ಮತ್ತು ಷೇರು ಫೀ ಸೇರಿ ಒಟ್ಟು ರೂ. 10,100/–ಗಳ ಚೆಕ್‌ನ್ನು ಪಡೆದು ದಿನಾಂಕ:23–04–2021 ರ ಬ್ಯಾಂಕಿನ ಆಡಳಿತ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಲಾಗಿರುತ್ತದೆ. ಸಭೆಗೆ ವಿಷಯವನ್ನು ಮಂಡಿಸುವ ಹಂತದಲ್ಲಿ ಮೂಡನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸದಸ್ಯತ್ವ ನೀಡದಂತೆ ಬ್ಯಾಂಕಿಗೆ ಯಾವುದೇ ಮನವಿಯನ್ನು ನೀಡಿರುವುದಿಲ್ಲ. ನಂತರ ದಿನಾಂಕ:15–04–2021 ರಂದು ಬಾಗೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 3 ಜನ ನಿರ್ದೇಶಕರುಗಳು, ಅವರ ಗ್ರಾಮಗಳನ್ನು ಬಾಗೂರು ಕೃಷಿ ಪತ್ತಿನ ಸಹಕಾರ ಸಂಘದಲ್ಲಿಯೇ ಮುಂದುವರೆಸಬೇಕು ಹಾಗೂ ಮೂಡನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ನೀಡಬಾರದು ಎಂದು ಮನವಿ ನೀಡಿರುತ್ತಾರೆ.<br><br>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಎ. ಗೋಪಾಲಸ್ವಾಮಿಯವರು ಬಾಗೂರು ಮತ್ತು ಕಲ್ಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನಿರ್ದೇಶಕರುಗಳು ಮತ್ತು ಸದಸ್ಯರುಗಳು ದೂರು ನೀಡಿರುವ ಬಗ್ಗೆ ದಿನಾಂಕ:15–04–2021 ರಂದು ಬ್ಯಾಂಕಿಗೆ ಪತ್ರ ಬರೆದಿರುತ್ತಾರೆ.<br><br>ಈಗಾಗಲೇ ದಿನಾಂಕ:18–03–2021 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿಯೇ ಸದರಿ ಸಂಘಕ್ಕೆ ಸದಸ್ಯತ್ವದ ಅರ್ಜಿ ನೀಡಲು ತೀರ್ಮಾನಿಸಿದ್ದು ಸದರಿ ತೀರ್ಮಾನದನ್ವಯ ಮೂಡನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸದಸ್ಯತ್ವ ನೀಡುವ ಕುರಿತು ಕ್ರಮವಿಡಲಾಗಿರುತ್ತದೆ. |

| | | |
|---|---|---|
| ಈ) | ಹಾಗೆಯೇ, ಯಾವುದೇ ವಿರೋಧ ಇಲ್ಲದಿದ್ದರೂ ಮತ್ತು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುವ ಜಂಬೂರು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತದ ಸದಸ್ಯತ್ವವನ್ನು ನೀಡದೇ ತಾರತಮ್ಯ ಮಾಡಿ ಸಹಕಾರಿ ತತ್ವಗಳನ್ನು ಪಾಲನೇ ಮಾಡದಿರುವ ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತದ ಆಡಳಿತ ಮಂಡಳಿ ವಿರುದ್ಧ ಸರ್ಕಾರ ಶಿಸ್ತು ಕ್ರಮ ವಹಿಸುವುದೇ? (ವಿವರ ನೀಡುವುದು) | ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನುಗ್ಗೇಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಈ ಸಂಘವು ಬ್ಯಾಂಕಿನ ಸದಸ್ಯತ್ವ ಪಡೆಯುವ ಸಂಬಂಧ ಸದಸ್ಯತ್ವದ ಅರ್ಜಿ ನೀಡುವಂತೆ ದಿನಾಂಕ: 28-01-2021 ರಂದು ಲಿಖಿತ ಅರ್ಜಿ ನೀಡಿರುತ್ತಾರೆ.<br><br>ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಹೋಬಳಿ ಅತ್ತಿಹಳ್ಳಿ, ಹುಲಿಕೆರೆ ಹಾಗೂ ತೆಂಕನಹಳ್ಳಿ ಗ್ರಾಮದ ಗ್ರಾಮಸ್ಥರು ಬ್ಯಾಂಕಿಗೆ ದಿನಾಂಕ:15-03-2021 ರಂದು ಅರ್ಜಿ ನೀಡಿದ್ದು, ಸದರಿ ಅರ್ಜಿಯಲ್ಲಿ ಜಂಬೂರು ಸಂಘದ ವ್ಯಾಪ್ತಿಯ ಅತ್ತಿಹಳ್ಳಿ, ಹುಲಿಕೆರೆ ಹಾಗೂ ತೆಂಕನಹಳ್ಳಿ ಗ್ರಾಮಸ್ಥರು, ಸದರಿ ಜಂಬೂರು ಸಂಘವನ್ನು ರಾಜಕೀಯ ಕಾರಣಕ್ಕಾಗಿ ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿ, ಸಾಕಷ್ಟು ಕೃಷಿ ಹಿಡುವಳಿ ಭೂಮಿ ಇಲ್ಲದೇ ಇದ್ದರೂ ಜಂಬೂರು ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸಿರುತ್ತಾರೆ, ಸದರಿ ಸಂಘದಲ್ಲಿ ಪಾರದರ್ಶಕವಾಗಿ ಎಲ್ಲಾ ರೈತರಿಗೆ ಸದಸ್ಯತ್ವ ನೀಡಿರುವುದಿಲ್ಲ ಹಾಗೂ ಅತ್ತಿಹಳ್ಳಿ, ಹುಲಿಕೆರೆ ಹಾಗೂ ತೆಂಕನಹಳ್ಳಿ ಗ್ರಾಮಗಳನ್ನು ನುಗ್ಗೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಬೇರ್ಪಡಿಸಲಾಗಿದ್ದು, ಈ ರೀತಿ ಸಹಕಾರ ಸಂಘಗಳ ವಿಭಜನೆಯಿಂದ ಎರಡೂ ಸಂಘಗಳು ದುಡಿಯುವ ಬಂಡವಾಳ ಮತ್ತು ಆದಾಯ ಇಲ್ಲದೇ ನಷ್ಟಕ್ಕೆ ಒಳಗಾಗುತ್ತವೆ. ಇದರಿಂದ ರೈತರಿಗೆ, ಮಹಿಳೆಯರಿಗೆ ಹಾಗೂ ಸಾಮಾನ್ಯ ಜನರಿಗೆ ತೊಂದರೆ ಉಂಟಾಗುವುದರಿಂದ ಸದರಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರದ್ದುಪಡಿಸುವಂತೆ ಇಲಾಖಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿರುತ್ತದೆ, ಆದುದರಿಂದ ಕಾನೂನು ಮತ್ತು ನಿಯಮಾವಳಿ ವಿರುದ್ಧವಾಗಿ ನೋಂದಾಯಿಸಲಾಗಿರುವ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಸದಸ್ಯತ್ವ ನೀಡಲು ಕೋರಿ ಅರ್ಜಿ ಸಲ್ಲಿಸಿದಲ್ಲಿ ಬ್ಯಾಂಕಿನ ಸದಸ್ಯತ್ವವನ್ನು ನೀಡಬಾರದೆಂದು ಮನವಿ ಮಾಡಿದ್ದರು.<br><br>ಈ ಕುರಿತು ಚರ್ಚಿಸಲಾಗಿ, ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಪ್ರಕಾರ ಸಂಘವನ್ನು ರಚಿಸುವಾಗ ಪ್ರತಿ ಸಂಘವು ಕನಿಷ್ಟ 4000 ಎಕರೆ ಸಾಗುವಳಿ ಭೂಮಿಯನ್ನು, ಕನಿಷ್ಟ 05 ಕಿ.ಮೀ. ಪರಿಧಿಯನ್ನು, ಕನಿಷ್ಟ 600 ಕುಟುಂಬಗಳ ಗ್ರಾಮಗಳನ್ನು ಹೊಂದಿರುವುದು ಮಾನದಂಡವಾಗಿರುತ್ತದೆ, ಸದರಿ ಮಾನದಂಡಗಳನ್ನು |

| | | |
|---|---|---|
| | | ಅನುಸರಿಸದೇ ಸಂಘಗಳನ್ನು ವಿಭಜನೆ ಮಾಡಿದಲ್ಲಿ ಸಂಘಗಳು ನಷ್ಟವನ್ನು ಹೊಂದಿ, ಕಾರ್ಯಸ್ಥಗಿತವಾಗುತ್ತವೆ ಹಾಗೂ ಅತ್ತಿಹಳ್ಳಿ, ಹುಲಿಕೆರೆ ಹಾಗೂ ತೆಂಕನಹಳಿ ಗ್ರಾಮಸ್ಥರುಗಳ ಮನವಿಯ ಹಿನ್ನಲೆಯಲ್ಲಿ ಹಾಗೂ ಈ ಕುರಿತು ಪರಿಶೀಲಿಸುವುದು ಅಗತ್ಯವೆಂದು ತಿಳಿದು ಸದರಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬ್ಯಾಂಕಿನ ಸದಸ್ಯತ್ವ ಪಡೆಯುವ ಅರ್ಜಿಯನ್ನು ನೀಡುವ ವಿಷಯವನ್ನು ಮುಂದೂಡಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಸದರಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಈ ಕುರಿತು ಬ್ಯಾಂಕಿನಿಂದ ಹಿಂಬರಹ ನೀಡಲಾಗಿರುತ್ತದೆ.<br><br>ಮುಂದುವರೆದು, ಅಧ್ಯಕ್ಷರು, ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇವರು ದಿನಾಂಕ:12-05-2017 ರ ಸುತ್ತೋಲೆಯಂತೆ ಜಂಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಘವನ್ನು ರಚಿಸಲಾಗಿದ್ದು, ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸದಸ್ಯತ್ವ ನೀಡದಿದ್ದರೆ, ಈ ಭಾಗದ ರೈತರಿಗೆ ಹಾಗೂ ಸಾಮಾನ್ಯ ಜನರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಜಂಬೂರು ಸಂಘಕ್ಕೆ ಸದಸ್ಯತ್ವ ನೀಡಬೇಕೆಂದು ದಿನಾಂಕ:29-05-2021 ರಂದು ಲಿಖಿತ ಮನವಿ ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ, ಹಾಸನ ಇವರ ಆದೇಶ ಸಂಖ್ಯೆ: ಎಂ.ಎ.ಜಿ / 892 /2019-20, ದಿ:18.05.2021 ರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ವಾಹನ ಸಂಚಾರ ಹಾಗೂ ವ್ಯಕ್ತಿಗಳ ಓಡಾಟವನ್ನು ನಿರ್ಭಂದಿಸಿರುವುದರಿಂದ, ಲಾಕ್‌ಡೌನ್ ತೆರೆವುಗೊಳಿಸಿದ ನಂತರ ದಿನಾಂಕ:12.08.2021 ರಂದು ಆಡಳಿತ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಲಾಗಿ, ದಿನಾಂಕ:11.08.2021 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಜಂಬೂರು ಪ್ಯಾಕ್ಸ್‌ಗೆ ಬ್ಯಾಂಕಿನ ಸದಸ್ಯತ್ವ ಪಡೆಯುವ ಸಂಬಂಧ ನಿಗದಿತ ಅರ್ಜಿ ನಮೂನೆಯನ್ನು ನೀಡಲು ಒಪ್ಪಿ ತೀರ್ಮಾನಿಸಿ ಅರ್ಜಿ ನೀಡಲಾಗಿದೆ.<br><br>ಸದರಿ ಸಂಘದವರು ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ದಿನಾಂಕ: 20.09.2021 ರಂದು ಬ್ಯಾಂಕಿಗೆ ನೀಡಿರುತ್ತಾರೆ. ಸದರಿ ಅರ್ಜಿಯನ್ನು ದಿನಾಂಕ: 24.11.2021 ರಂದು ಆಡಳಿತ ಮಂಡಳಿ ಸಭೆಗೆ ಮಂಡಿಸಲಾಗಿತ್ತು. ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್ ಚುನಾವಣೆಗೆ ಅಧಿಸೂಚನೆ |

| | | |
|---|---|---|
| | | ಹೊರಡಿಸಿದ್ದರಿಂದ, ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಸಭೆಯನ್ನು ದಿನಾಂಕ: 19.12.2021 ರಂದು ಮುಂದೂಡಲಾಗಿರುತ್ತದೆ.<br>ಆದುದರಿಂದ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಜಂಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸದಸ್ಯತ್ವ ನೀಡಲು ತೀರ್ಮಾನ ಕೈಗೊಳ್ಳಲಾಗುವುದು. |

**ಸಂಖ್ಯೆ: ಸಿಒ 354 ಸಿಎಲ್‌ಎಸ್ 2021**

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

# ಹಾಸನ ಜಿಲ್ಲಾ ಸಹಕಾರ

# ಕೇಂದ್ರ ಬ್ಯಾಂಕ್ ನಿಯಮಿತ

"ಉನ್ನತಿ", ಬಿ.ಎಂ. ರಸ್ತೆ, ಹಾಸನ - 573 201






# ಬ್ಯಾಂಕಿನ ಉಪ ನಿಯಮಗಳು

(ದಿನಾಂಕ 30-10-2013ರಿಂದ)

ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

e-mail:jrcs-mysore-ka@nic.in
Phone No:0821-2520823/2431414

**ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು ಇವರ ಕಾರ್ಯಾಲಯ**

**[illegible] ಕಚೇರಿಗಳ ಕಟ್ಟಡ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-570024**

ಸಂಖ್ಯೆ: ಜೆಆರ್‌ಎಂ/ಎಸ್-7/ಎಎಂಡಿ/180/2013-14 ದಿ:30.10.2013

## ದೃಢೀಕರಣ ಪತ್ರ

ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಹಾಸನ ರವರು ದಿನಾಂಕ 23.09.2013 ರಂದು ನಡೆದ 2012-13 ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಅಂಗೀಕರಿಸಿರುವ ಸಮಗ್ರ ಬೈಲಾ ಸಂಖ್ಯೆ 1 ರಿಂದ 22 ರವರೆಗಿನ ತಿದ್ದುಪಡಿಯನ್ನು ಈ ಕಛೇರಿಯ ಆದೇಶದ ಸಂಖ್ಯೆ: ಜೆಆರ್‌ಎಂ / ಎಸ್-7 / ಎಎಂಡಿ / 180 / 2013-14 ದಿನಾಂಕ:30-10-2013 ರಂತೆ ಅನುಮೋದಿಸಿ, ನೋಂದಾಯಿಸಲಾಗಿದೆ ಎಂಬುದಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 12(3) ರ ರೀತ್ಯಾ ದೃಢೀಕರಿಸಿರುತ್ತೇನೆ.

(ಡಾ॥ ಎಚ್.ಆರ್.ಕೃಷ್ಣಯ್ಯಗೌಡ)
ಸಹಕಾರ ಸಂಘಗಳ ಜಂಟಿ ನಿಬಂಧಕರು
ಮೈಸೂರು ಪ್ರಾಂತ, ಮೈಸೂರು

ಗೆ,

ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
ಹಾಸನ

ತ. ತನ್ನ ನೌಕರರು ಮತ್ತು ಸದಸ್ಯ ಸಹಕಾರ ಸಂಘಗಳಿಗೆ ಸಹಕಾರಿ ಮತ್ತು ಬ್ಯಾಂಕಿಂಗ್ ಮತ್ತು ವ್ಯವಸ್ಥಾಪನೆ, ಗಣಕೀಕರಣ ಮತ್ತಿತರೆ ಸಂಬಂಧದ ವಿಷಯಗಳಲ್ಲಿ ತರಬೇತಿ ನೀಡುವುದಕ್ಕೆ ವ್ಯವಸ್ಥೆ ಮಾಡುವುದು.

ಥ. ಸದಸ್ಯ ಸಂಘಗಳಿಂದ ಬರತಕ್ಕ ಬಾಕಿಯನ್ನು ವಸೂಲು ಮಾಡಲು ಅನುಕೂಲವಾಗುವಂತೆ ನಿಬಂಧಕರ ಆಜ್ಞೆಯ ಮೇರೆಗೆ ಹಾಗೂ ಅವರು ವಿಧಿಸಿದ ಷರತ್ತಿಗೊಳಪಟ್ಟು ಬ್ಯಾಂಕಿಗೆ ಸಾಲಗಾರ ಸಹಕಾರ ಸಂಘಗಳ ಸಮಾಪನಾ ಕಾರ್ಯವನ್ನು ಕೈಗೊಳ್ಳುವುದು.

ದ. ಸಿಬ್ಬಂದಿ ವರ್ಗದವರ ಮತ್ತು ಅವರ ಅವಲಂಬಿತರ ಅನುಕೂಲಕ್ಕಾಗಿ, ಸಹಾಯಕ್ಕಾಗಿ, ಬೆಂಬಲಕ್ಕಾಗಿ, ನಿಧಿ ಸ್ಥಾಪಿಸುವುದು. ಇಂತಹ ನಿಧಿಗೆ ಕೇಂದ್ರ, ಬ್ಯಾಂಕಿನಿಂದ ಮತ್ತು ನೌಕರರಿಂದ ಕೊಡಬೇಕಾದ ವಂತಿಗೆಯ ದರವನ್ನು ನಿಧಿಯ ನಿರ್ವಹಣೆಯ ನಿಯಮಗಳನ್ನು ಆಡಳಿತ ಸಮಿತಿಯು ಪ್ರಥಮವಾಗಿ ಮಂಜೂರಾತಿ ನೀಡಿದ ನಂತರ ಸ್ಥಾಪಿಸುವುದು.

ನ. ಸಾಲ ನೀಡಿಕೆ ಮತ್ತು ಸಾಲ ಪಡೆಯುವಿಕೆ ಲೇವಣಾತಿಗಳ ಸಂಗ್ರಹಣೆ ಬಗ್ಗೆ ವಿಚಾರ ಸಂಕೀರ್ಣಗಳು, ಸಮ್ಮೇಳನಗಳು, ಸಭೆಗಳನ್ನು ನಡೆಸುವುದು ಮತ್ತು ಪ್ರಚಾರ ಜಾಹೀರಾತು ಕೈಗೊಳ್ಳುವುದು, ಮಾಹಿತಿ ಸಂಗ್ರಹಿಸುವುದು, ಮಾರಾಟ ಜ್ಞಾನದ ಪ್ರಕಟಣೆಗೆ ವ್ಯವಸ್ಥೆ ಮಾಡುವುದು ಮತ್ತು ಕೃಷಿ ಸಾಲ ಮತ್ತಿತರ ಸಂಬಂಧಿತ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಿಯತಕಾಲಿಕಗಳನ್ನು ಪ್ರಕಟಿಸುವುದು.

ಪ. ಸದಸ್ಯ ಸಹಕಾರ ಸಂಘಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ನಿಬಂಧಕರ ವಿವಿಧ ಬಗೆಯ ಸಹಕಾರ ಸಂಘಗಳಿಂದ ರೂಪಿಸಿರುವ ರೂಪಿಸಲ್ಪಡುವ ಅಥವಾ ಬ್ಯಾಂಕಿಗೆ ಅವಶ್ಯಕವೆಂದು ತೋರುವ ವ್ಯಾಪಾರಾಭಿವೃದ್ಧಿ ಯೋಜನೆಯನ್ನು ಅನುಷ್ಠಾಗೊಳಿಸಲು ಪ್ರತ್ಯೇಕ ಸಾಲ ಸೌಲಭ್ಯ ನೀಡುವುದು ಮತ್ತು ಯೋಜನೆ ಗುರಿ ಸಾಧನೆ ಪ್ರಗತಿಗಾಗಿ ಸೂಕ್ತ ವ್ಯವಸ್ಥೆ ಮಾಡುವುದು.

ಫ. ಸಾಮಾನ್ಯವಾಗಿ ಬ್ಯಾಂಕು ಅಥವಾ ಬ್ಯಾಂಕರ್‌ಗಳು ರೂಢಿಯಲ್ಲಿ ನಡೆಸುವಂತಹ ಕರ್ತವ್ಯಗಳು ಕಾರ್ಯಕಲಾಪಗಳು ಮತ್ತು ವ್ಯವಹಾರವನ್ನು ನಡೆಸುವುದು ಹಾಗೂ ಮೇಲ್ಕಂಡ ಒಂದು ಅಥವಾ ಇತರೆ ಉದ್ದೇಶಗಳಿಗೆ ಪೂರಕವಾದ ಪ್ರಯೋಜನಕಾರಿಯಾದ ಅಥವಾ ಸಂಭವನೀಯ ಕಾರ್ಯಗಳು ಮತ್ತು ವಿಷಯಗಳು ಸೇರಿದಂತೆ ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಬ್ಯಾಂಕಿನ ನಿಧಿಗಳು, ಆಸ್ತಿಗಳು ಮತ್ತು ಸ್ವತ್ತುಗಳ ಬಗ್ಗೆ ವ್ಯವಹರಿಸುವುದು ಹಾಗೂ ಸಹಕಾರಿ ಬ್ಯಾಂಕಿಂಗ್ ಮತ್ತು ಸಹಕಾರದ ಹಿತಾಸಕ್ತಿಯನ್ನು ಪೋಷಿಸಲು ಬೇಕಾಗುವ ಇತರೆ ಕಾರ್ಯಗಳನ್ನು ಕೈಗೊಳ್ಳುವುದು.

ಬ. ಕಾಯಿದೆಯಡಿಯಲ್ಲಿ ನೋಂದಣಿಯಾದ ಸಹಕಾರ ಸಂಘಗಳ ಪರವಾಗಿ ಖಾತರಿಗಳನ್ನು ನೀಡುವುದು. ಉಪನಿಮಯಗಳಿಗನುಸಾರ ವ್ಯವಹಾರ ನಡೆಸುವುದಕ್ಕೆ ಅವಶ್ಯಕವಾದ ಯಂತ್ರೋಪಕರಣಗಳು, ಸರಕುಗಳು, ರಸಗೊಬ್ಬರ ಮತ್ತು ಇತರೆ ಅಗತ್ಯ ವಸ್ತುಗಳ ಆಮದು ಮತ್ತು ಖರೀದಿಗೆ ಹಣ ಪಾವತಿಯ ಮೇಲೆ ಭರವಸೆ ಪತ್ರ ನೀಡುವುದು ಮತ್ತು ಬ್ಯಾಂಕಿನ ಇತರೆ ಅಂಗ ಸಂಸ್ಥೆಗಳಿಗೆ ಮತ್ತು ಲೇವಣಿದಾರರ ಪರವಾಗಿ ಅಂತಹ ಖಾತರಿಯನ್ನು ನೀಡುವುದು.

ಭ. ಬ್ಯಾಂಕಿನ ಕಾರ್ಯ ವ್ಯಾಪ್ತಿಯಲ್ಲಿನ ಸ್ವಸಹಾಯ ಗುಂಪುಗಳನ್ನು ಹಾಗೂ ಜಂಟಿ ಜವಾಬ್ದಾರಿ ಗುಂಪುಗಳನ್ನು ಪ್ರೋತ್ಸಾಹಿಸುವುದು ಮತ್ತು ಸಾಲ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.

## 4. ಪಾಲು ಬಂಡವಾಳ ಮತ್ತು ಸದಸ್ಯತ್ವ:

### i) ಪಾಲು ಬಂಡವಾಳ :

ಅ. ಬ್ಯಾಂಕಿನ ಅಧಿಕೃತ ಷೇರು ಬಂಡವಾಳದ ಮಿತಿಯನ್ನು ಕಾಲ ಕಾಲಕ್ಕೆ ನಿಗದಿಪಡಿಸುವ ಅಧಿಕಾರವು ಬ್ಯಾಂಕಿನ ವಾರ್ಷಿಕ ಮಹಾ ಸಭೆಗಿರತಕ್ಕದ್ದು. ಹಾಗೂ ವಾರ್ಷಿಕ ಮಹಾ ಸಭೆಯಲ್ಲಿ ನಿಗಧಿಪಡಿಸಿದ 'ಎ' ಮತ್ತು 'ಬಿ' ವರ್ಗದ ಷೇರು ಬಂಡವಾಳದ ಮಿತಿಯನ್ನು ಆಡಳಿತ ಮಂಡಳಿಯು ಪರಿಪಾಲಿಸತಕ್ಕದ್ದು.

ಆ. 'ಎ' ವರ್ಗದ ಷೇರುಗಳು ಪ್ರತಿಯೊಂದು ಷೇರಿಗೆ ರೂ. 1000 ಇರತಕ್ಕದ್ದು.

ಇ. 'ಬಿ' ವರ್ಗದ ಷೇರುಗಳು ಪ್ರತಿಯೊಂದು ಷೇರಿಗೆ ರೂ. 2000 ಇರತಕ್ಕದ್ದು.

ಈ ಸಹಕಾರಿ ಕಾಯ್ದೆ ನಿಯಮಗಳಿಗೊಳಪಟ್ಟು 'ಎ' ವರ್ಗದ ಷೇರುಗಳನ್ನು ರಾಜ್ಯ ಸರ್ಕಾರ ಮತ್ತು ರಾಜ್ಯ ಸಹಕಾರಿ ಬ್ಯಾಂಕಿಗೆ ಕೊಡತಕ್ಕದ್ದು. ಈ ಷೇರುಗಳ ಹಂಚಿಕೆಯ ಸಮಯದಲ್ಲಿ ಒಪ್ಪಂದವಾದಂತೆ ನಿರ್ದಿಷ್ಟ ಕಾಲದಲ್ಲಿ ಹಾಗೂ ನಿರ್ದಿಷ್ಟ ರೀತಿಯಲ್ಲಿ 'ಎ' ವರ್ಗದ ಷೇರುಗಳನ್ನು ಹಿಂದಿರುಗಿಸಲು ಬ್ಯಾಂಕಿಗೆ ಅಧಿಕಾರ ಇರತಕ್ಕದ್ದು.

ಉ. ರಾಜ್ಯ ಸರ್ಕಾರ ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ ಉಳಿದ ಸಹಕಾರ ಸಂಘಗಳಿಗೆ ಮಾತ್ರ 'ಬಿ' ವರ್ಗದ ಷೇರುಗಳನ್ನು ಕೊಡತಕ್ಕದ್ದು.

ಊ. ಷೇರು ಅರ್ಜಿಯ ಜೊತೆಗೆ ಸದಸ್ಯ ಹಾಗೂ ಸದಸ್ಯತ್ವದ ಸಲುವಾಗಿ ರೂ. 50-00 ಪ್ರವೇಶ ಧನ ಕೊಡತಕ್ಕದ್ದು. ಈಗಾಗಲೇ ಸದಸ್ಯ/ಸಹ ಸದಸ್ಯನಾಗಿರದಿದ್ದಲ್ಲಿ ವರ್ಗಾಯಿಸಲ್ಪಡುವವರು ರೂ. 50-00 ಶುಲ್ಕ ಕೊಡತಕ್ಕದ್ದು. ಇದನ್ನು ವಾಪಸ್ಸು ಮಾಡತಕ್ಕದ್ದಲ್ಲ.

(4)

ಋ. 'ಸಿ' ವರ್ಗದ ಷೇರುಗಳು ಪ್ರತಿಯೊಂದು ಷೇರಿಗೆ ರೂ 100 ಇರತಕ್ಕದ್ದು.

ಎ. 'ಸಿ' ವರ್ಗದ ಷೇರುಗಳನ್ನು ಸಹಕಾರ ಸಂಘಗಳ ಕಾಯ್ದೆ ಕಲಂ 18(1)ರಲ್ಲಿ ಹೇಳಿರುವಂತೆ ಬ್ಯಾಂಕಿನ ಸಹಸದಸ್ಯತ್ವ ಪಡೆದ ಬಿಡಿ ವ್ಯಕ್ತಿಗಳಿಗೆ ಹಾಗೂ ನೊಂದಾಯಿಸಲ್ಪಟ್ಟ ಸಂಸ್ಥೆಗಳಿಗೆ ಮಾತ್ರ ಕೊಡತಕ್ಕದ್ದು.

## ii) ಸದಸ್ಯತ್ವ :

ಅ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿಯಲ್ಲಿ ನೋಂದಣಿಯಾದ ಯಾವುದೇ ಸಹಕಾರಿ ಸಂಘ, ರಾಜ್ಯ ಸರ್ಕಾರ ಮತ್ತು ರಾಜ್ಯ ಸಹಕಾರಿ ಬ್ಯಾಂಕ್, ಬ್ಯಾಂಕಿನ ಸದಸ್ಯರಾಗಲೂ ಅರ್ಹವಾಗಿರುತ್ತವೆ. 18 ವರ್ಷ ಮೇಲ್ಪಟ್ಟು ಸ್ವಾಸ್ಥಚಿತ್ತನಾದ ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಯಾವುದೇ ವ್ಯಕ್ತಿ ನಾಮ ಮಾತ್ರ ಸದಸ್ಯತ್ವ ಹಾಗೂ ಸಹ ಸದಸ್ಯತ್ವ ಹೊಂದಲು ಅರ್ಹನಾಗಿರುತ್ತಾನೆ.

ಆ. ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಲು ಸಹಕಾರ ಸಂಘವು ಪ್ರತಿ ಷೇರಿಗೆ ರೂ. 2000-00 ಷೇರು ಧನವನ್ನು ಸಂಘದ ಆಡಳಿತ ಮಂಡಳಿಯ ತೀರ್ಮಾನದೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಆಡಳಿತ ಸಮಿತಿಯು ಈ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಅರ್ಜಿಯ ನಮೂನೆಯನ್ನು ನಿಗದಿಗೊಳಿಸಬಹುದು. ಮತ್ತು ಸದಸ್ಯತ್ವದ ಅರ್ಜಿಯನ್ನು ತನ್ನ ವಿವೇಚನೆಗೆ ಒಳಪಟ್ಟು ಮಂಜೂರು ಮಾಡಬಹುದು ಅಥವಾ ತಿರಸ್ಕರಿಸಬಹುದು.

ಇ. ಪ್ರತಿಯೊಬ್ಬ ಸದಸ್ಯನೂ ಕನಿಷ್ಠ ಒಂದು ಷೇರನ್ನಾದರೂ ಹೊಂದಿರತಕ್ಕದ್ದು.

ಈ. ಯಾವುದೇ ಸದಸ್ಯರು ಕಡೇ ಪಕ್ಷ ಒಂದು ಪೂರ್ತಿ ಪಾವತಿಯಾದ ಷೇರನ್ನು ಮತ್ತು ಪ್ರವೇಶ ಶುಲ್ಕ ರೂ. 50-00 ಪಾವತಿಸದ ಹೊರತು ಒಬ್ಬ ಸದಸ್ಯರ ಹಕ್ಕನ್ನು ಚಲಾಯಿಸಲು ಅಧಿಕಾರವಿರುವುದಿಲ್ಲ. ನಾಮ ಮಾತ್ರ ಸದಸ್ಯರ ಸಹ ಸದಸ್ಯರ ಹಕ್ಕುಗಳು ಮತ್ತು ಜವಾಬ್ದಾರಿಗಳು ಕಾಯ್ದೆ ಮತ್ತು ನಿಯಮಗಳ ಪ್ರಕಾರವಿರತಕ್ಕದ್ದು. ಪ್ರತಿಯೊಬ್ಬ ಸದಸ್ಯನು ತಾನು ಪಡೆದ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲದ ಮೊತ್ತದ ಕನಿಷ್ಠ ಶೇ. 5% ರಷ್ಟು ಮೌಲ್ಯದ ಷೇರುಗಳನ್ನು ಹೊಂದಿರತಕ್ಕದ್ದು. ಅಲ್ಲದೇ ರಾಜ್ಯ ಸರ್ಕಾರ, ನಬಾರ್ಡ್, ಹಾಗೂ ರಿಜರ್ವ್ ಬ್ಯಾಂಕ್ ನಿಗದಿ ಪಡಿಸಿದಂತೆ ಷೇರು ಧಾರಣ ಮಾಡಿರತಕ್ಕದ್ದು.

ಉ. ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ಉಪ ನಿಯಮಗಳಿಗೆ ಅನುಸಾರವಾಗಿ ಷೇರು ಹಂಚಿಕೆಗಾಗಿ ಬರುವ ಅರ್ಜಿಗಳನ್ನು ಭಾಗಶಃ ಅಥವಾ ಪೂರ್ತಿಯಾಗಿ ತಿರಸ್ಕರಿಸುವ ಅಧಿಕಾರವು ಬ್ಯಾಂಕಿಗೆ ಇರುತ್ತದೆ.

ಊ. ಷೇರು ಪ್ರಮಾಣ ಪತ್ರವನ್ನು ಬ್ಯಾಂಕು ಅವುಗಳನ್ನು ಹಂಚಿಕೆ ಮಾಡಿದ ಮೂರು ತಿಂಗಳೊಳಗಾಗಿ ತನ್ನ ಸಾಮಾನ್ಯ ಮೊಹರಿನೊಂದಿಗೆ ಬ್ಯಾಂಕಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಸಹಿಗಳನ್ನು ಹೊಂದಿರತಕ್ಕದ್ದು, ಹಂಚಿಕೆಯಾದ ಷೇರು ಪತ್ರಗಳಲ್ಲಿ ಅವುಗಳ ಮೌಲ್ಯವನ್ನು ನಮೂದಿಸತಕ್ಕದ್ದು.

ಋ. ಯಾವುದೇ ಷೇರು ಪ್ರಮಾಣ ಪತ್ರವು ಹರಿದು ಹೋದಲ್ಲಿ ಅಥವಾ ವಿರೂಪಗೊಂಡಲ್ಲಿ ಅದರ ಹಾಜರಿಯ ಮೇಲೆ ಬ್ಯಾಂಕು ಅದನ್ನು ರದ್ದುಪಡಿಸಬಹುದಾಗಿದೆ ಮತ್ತು ಅದರ ಬದಲಿಗೆ ಒಂದು ಹೊಸ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ. ಯಾವುದೇ ಷೇರು ಪ್ರಮಾಣ ಪತ್ರವು ಕಳೆದು ಹೋದಲ್ಲಿ ಅಥವಾ ನಾಶಗೊಂಡಲ್ಲಿ ಅದರ ಬದಲಿಗೆ ಆ ಬಗ್ಗೆ ತೃಪ್ತಿಕರ ರುಜುವಾತಿನ ಮೇರೆಗೆ ಮತ್ತು ಬ್ಯಾಂಕು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿದರ ಮೇರೆಗೆ ಒಂದು ಹೊಸ ಷೇರು ಪ್ರಮಾಣ ಪತ್ರವನ್ನು ಅರ್ಹ ಹಕ್ಕುದಾರರಿಗೆ ವಿತರಿಸತಕ್ಕದ್ದು. ಈ ಉಪನಿಯಮಗಳಡಿಯಲ್ಲಿ ನೀಡಲ್ಪಟ್ಟ ಪ್ರತಿ ಈ ಹೊಸ ಷೇರು ಪ್ರಮಾಣ ಪತ್ರಕ್ಕೆ ರೂ. 10 ಶುಲ್ಕನ್ನು ಬ್ಯಾಂಕಿಗೆ ಪಾವತಿ ಮಾಡತಕ್ಕದಿರುತ್ತದೆ.

ೠ. ಷೇರುದಾರರ ಹೊಣೆಯು ಅವರಿಂದ/ಅದರಿಂದ ಪಾವತಿಯಾದ ಷೇರು ಅಥವಾ ಷೇರುಗಳಿಗೆ ಪರಿಮಿತವಾಗಿರುತ್ತದೆ.

ಎ. ಬ್ಯಾಂಕಿನ ಬಂಡವಾಳದಲ್ಲಿ ಸದಸ್ಯನ ಷೇರು ಅಥವಾ ಪ್ರಯೋಜನಾಂಶ ಮತ್ತು ಠೇವಣಿಗಳ ಮೇಲೆ ಸದಸ್ಯನಿಗೆ ಅಥವಾ ಮಾಜಿ ಸದಸ್ಯನಿಗೆ ಕೊಡಬೇಕಾದ ಯಾವುದೇ ಲಾಭಾಂಶ, ಬೋನಸ್ ಅಥವಾ ಲಾಭಗಳ ಮೇಲೆ ಬ್ಯಾಂಕಿಗೆ ಬರಬೇಕಾದ ಯಾವುದೇ ಸಾಲ ಅಥವಾ ಬಾಕಿಯ ಬಗ್ಗೆ ಬ್ಯಾಂಕಿನ ಅಧಿಕಾರವಿರತಕ್ಕದ್ದು, ಮತ್ತು ಸದಸ್ಯನ ಲೆಕ್ಕಕ್ಕೆ ಜಮಾ ಆದ ಅಥವಾ ಕೊಡಬೇಕಾದ ಇಂತಹ ಹಣವನ್ನು ಆತನಿಂದ ಬರಬೇಕಾದ ಸಾಲಕ್ಕೆ ಅಥವಾ ಬಾಕಿಯಾಗಿ ನಿಂತಿರುವ ಹಣಕ್ಕೆ ವಜಾ ಮಾಡಬಹುದು. ಪರಂತು ಸದಸ್ಯ ಸಂಘಗಳು ತೊಡಗಿಸಿದ ಅಪದ್ಧನ ಮೊತ್ತದ ಮೇಲೆ ಇಂತಹ ಅಧಿಕಾರ ಇರುವುದಿಲ್ಲ.

ಏ. ಈ ಕೆಳಕಂಡ ಕಾರಣಗಳಿಂದ ಬ್ಯಾಂಕಿನೊಂದಿಗೆ ಸದಸ್ಯತ್ವರದ್ದಾಗಿರುತ್ತದೆ.

1. ಸಹಕಾರ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಅನರ್ಹತೆಗೊಂಡಾಗ

2. ಯಾವುದೇ ಸದಸ್ಯರು ಈ ಕೆಳಕಂಡವುಗಳನ್ನು ನಿರ್ವಹಿಸಿದಾಗ ಅಂತಹ ಸದಸ್ಯರನ್ನು ಬ್ಯಾಂಕಿನ ಸದಸ್ಯತ್ವದಿಂದ ಬ್ಯಾಂಕಿನ ಮಹಾಸಭೆಯ ತೀರ್ಮಾನಕ್ಕೊಳಪಟ್ಟು ಆಡಳಿತ ಮಂಡಳಿಯು ತೆಗೆದು ಹಾಕಬಹುದಾಗಿದೆ.

ಅ. ಕಾಯಿದೆ ಅಥವಾ ನಿಯಮಗಳು, ಬ್ಯಾಂಕಿನ ಉಪ ನಿಯಮಗಳ ಅವಕಾಶಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದಾಗ.

ಆ. ಸುಳ್ಳು ವಿವರಣೆ ಅಥವಾ ಮೋಸದ ದಾಖಿಲೆಗಳ ಮೂಲಕ ಬ್ಯಾಂಕನ್ನು ಉದ್ದೇಶಪೂರ್ವಕವಾಗಿ ವಂಚಿಸಿದಾಗ ಅಥವಾ ಬ್ಯಾಂಕಿಗೆ ಯಾವುದೇ ರೀತಿಯಲ್ಲಿ ವಂಚನೆಗೊಳಿಸಿದಾಗ.

ಇ. ನಿಗಧಿ ಪಡಿಸಿದ ನೀತಿ ಸಂಹಿತೆ ಇತ್ಯಾದಿಯ ಉಲ್ಲಂಘನೆಯು ಸೇರಿದಂತೆ ಬ್ಯಾಂಕಿನ ಹಿತಾಸಕ್ತಿ ಪ್ರಸಿದ್ಧಿ, ಘನತೆ ಅಥವಾ ಸಮಗ್ರತೆಗೆ ಬಾಧಕವಾಗುವ ಅಥವಾ ಹಾನಿ ಮಾಡುವ ಸಂಭವವಿರುವ ಯಾವುದೇ ಕೃತ್ಯವನ್ನು ಮಾಡಿದಾಗ.

3. ಒಬ್ಬ ಸದಸ್ಯರಾಗಿ ಕಾಯಿದೆ, ನಿಯಮಗಳ ಮತ್ತು ಈ ನಿಯಮಗಳಡಿಯಲ್ಲಿ ನಿಗಧಿ ಪಡಸಿದ ಬಾಧ್ಯತೆಗಳನ್ನು ನಿರಂತರ 3 ವರ್ಷಗಳ ಅವಧಿಗೆ ಪಾಲಿಸುವಲ್ಲಿ ವಿಫಲರಾದ ಒಬ್ಬ ಸದಸ್ಯರು ಅಂತಹ ಅವಧಿಯ ಮುಕ್ತಾಯದ ಮೇಲೆ ಸದಸ್ಯರಾಗಿ ಮುಂದುವರೆಯತಕ್ಕದ್ದಲ್ಲ.

4. ಒಂದು ಸಹಕಾರ ಸಂಘವು ಸಮಾಪನೆಗೊಂಡಾಗ ಅದರ ಸದಸ್ಯತ್ವರದ್ದಾಗತಕ್ಕದ್ದು.

## iii) ನಾಮ ಮಾತ್ರ ಸದಸ್ಯರು :

ಬ್ಯಾಂಕ್ ಯಾವುದೇ ವ್ಯಕ್ತಿಯನ್ನು ಅವರು ರೂ. 100/- ಪ್ರವೇಶ ಶುಲ್ಕವನ್ನು ಪಾವತಿ ಮಾಡುವುದರ ಮೇರೆಗೆ ಬ್ಯಾಂಕಿನ ನಾಮಮಾತ್ರ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದಾಗಿರುತ್ತದೆ. ಅಂತಹ ನಾಮಮಾತ್ರ ಸದಸ್ಯರು ಬ್ಯಾಂಕಿನ ಆಸ್ತಿ ಅಥವಾ ಲಾಭಗಳಲ್ಲಿ ಯಾವುದೇ ರೂಪದಲ್ಲಿ ಯಾವುದೇ ಪಾಲನ್ನು ಪಡೆಯಲು ಅರ್ಹರಿರುವುದಿಲ್ಲ. ಬ್ಯಾಂಕಿನ ಪದಾಧಿಕಾರಿಯಾಗಲು ಸಹ ಅರ್ಹರಿರುವುದಿಲ್ಲ. ನಾಮ ಮಾತ್ರ ಸದಸ್ಯರನ್ನಾಗಿ ವ್ಯಕ್ತಿಗಳ ಪ್ರವೇಶವು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಅ. ಬ್ಯಾಂಕಿನಿಂದ ಸಾಲ ಸೌಲಭ್ಯಗಳನ್ನು ಪಡೆಯಲು ಉದ್ದೇಶಿಸುವ ವೇತನದಾರರಾಗಿತಕ್ಕದ್ದು.

ಆ. ಚಿನ್ನಾಭರಣಗಳ ಭದ್ರತೆಯ ಮೇಲೆ ಸಾಲವನ್ನು ಪಡೆಯಲು ಇಚ್ಚಿಸುವ ವ್ಯಕ್ತಿಯಾಗಿರತಕ್ಕದ್ದು.

ಇ. ಗೃಹ ಬಳಕೆ ವಸ್ತುಗಳನ್ನು ಖರೀದಿಸುವ ಸಾಲ ಸೌಲಭ್ಯವನ್ನು ಪಡೆಯಲಿಚ್ಚಿಸುವ ಬ್ಯಾಂಕಿನ ಗ್ರಾಹಕರು.

ಈ. ವೇರ್ ಹೌಸ್ ರಶೀದಿ ಸಾಲ ಮತ್ತು ರಾಷ್ಟ್ರೀಯ ಉಳಿತಾಯ ಪತ್ರಗಳ ಆಧಾರ ಸಾಲವನ್ನು ಪಡೆಯಲಿಚ್ಚಿಸುವ ಬ್ಯಾಂಕಿನ ಗ್ರಾಹಕರು.

ಉ. ನಾಮ ಮಾತ್ರ ಸದಸ್ಯರು ಬ್ಯಾಂಕಿನ ಸರ್ವ ಸದಸ್ಯರ ಸಭೆಗೆ ಹಾಜರಾಗಲೂ ಮತ್ತು ಮತ ಚಲಾಯಿಸಲು ಹಕ್ಕನ್ನು ಹೊಂದಿರುವುದಿಲ್ಲ.

## iv) ಸಹ ಸದಸ್ಯರು:

ಅ) ಮನೆಯನ್ನು ಖರೀದಿಸಲು ಅಥವಾ ಗೃಹ ನಿರ್ಮಾಣ ಸಾಲ, ವಾಣಿಜ್ಯ ಸಂಕೀರ್ಣ ಸಾಲ, ವಾಹನ ಸಾಲ, ಮೀರಲೆತ ಸಾಲ, ಸ್ವ ಸಹಾಯ ಗುಂಪುಗಳ ಸಾಲ, ಜಂಟಿ ಜವಾಬ್ದಾರಿ ಸಾಲ, ಕೈಗಾರಿಕಾ ಸಾಲ, ಬ್ಯಾಂಕಿನ ಮೂಲಕ ನೇರವಾಗಿ ರೈತರಿಗೆ ನೀಡುವ ಕೃಷಿ ಸಾಲ, ಅಥವಾ ಉಪ ನಿಯಮ 4(3)ರನ್ನು ಹೊರತುಪಡಿಸಿ ಯಾವುದೇ ಇತರೇ ಕೃಷಿಯೇತರ ಸಾಲಕ್ಕಾಗಿ ಬ್ಯಾಂಕಿನಿಂದ ನೇರವಾಗಿ ಹಣಕಾಸಿನ ನೆರವನ್ನು ಪಡೆದುಕೊಳ್ಳಲು ಉದ್ದೇಶಿಸುವ ವ್ಯಕ್ತಿ ಹಾಗೂ ಸಂಘ ಸಂಸ್ಥೆಗಳನ್ನು ಬ್ಯಾಂಕು ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದಾಗಿದೆ. ಅವರು ಷೇರು ಬಂಡವಾಳವನ್ನು ಕನಿಷ್ಟ ರೂ. 100 ನ್ನು ಪಾವತಿಸಿ ಸಹ ಸದಸ್ಯತ್ವ ಪಡೆಯಬಹುದು. ಅಂತಹ ಸದಸ್ಯರು ಬ್ಯಾಂಕಿನ ಪದಾಧಿಕಾರಿಯಾಗಲು ಅರ್ಹರಿರುವುದಿಲ್ಲ. ಅಥವಾ ಸರ್ವ ಸದಸ್ಯರ ಸಭೆಯಲ್ಲಿ ಹಾಜರಾಗಲು ಮತ್ತು ಮತದಾನ ಮಾಡಲು ಅವರಿಗೆ ಹಕ್ಕಿರುವುದಿಲ್ಲ.

ಆ) ಬ್ಯಾಂಕಿನ ಮೂಲಕ ನೇರವಾಗಿ ರೈತರಿಗೆ ನೀಡುವ ಕೃಷಿ ಸಾಲದ ಮೊಬಲಗಿನಲ್ಲಿ ಶೇ. 10 ರಷ್ಟು 'ಸಿ' ಕ್ಲಾಸ್ ಷೇರು ಮೊಬಲಗನ್ನು ಪಡೆಯಬಹುದು.

ಇ) ಜಂಟಿ ಜವಾಬ್ದಾರಿ ಸಾಲಗಳಲ್ಲಿ ಸಾಲದ ಮೊಬಲಗಿನ ಶೇ. 5ರಷ್ಟು 'ಸಿ' ಕ್ಲಾಸ್ ಷೇರು ಮೊಬಲಗನ್ನು ಪಡೆಯಬಹುದು.

ಈ) ಬ್ಯಾಂಕಿನಲ್ಲಿ ತೊಡಗಿಸುವ ಅವಧಿತ ಠೇವಣಿಗಳಲ್ಲಿ, ಠೇವಣಿದಾರರುಗಳಿಂದ ಷೇರು ಬಂಡವಾಳವನ್ನು ಕನಿಷ್ಠ ರೂ. 100/-ನ್ನು ಪಾವತಿಸಿ ಸಹ ಸದಸ್ಯತ್ವ ಪಡೆಯಬಹುದು. ಅಂತಹ ಸದಸ್ಯರು ಬ್ಯಾಂಕಿನ ಪದಾಧಿಕಾರಿಯಾಗಲು ಅರ್ಹರಿರುವುದಿಲ್ಲ ಅಥವಾ ಸರ್ವಸದಸ್ಯರ ಸಭೆಯಲ್ಲಿ ಹಾಜರಾಗಲು ಮತ್ತು ಮತದಾನ ಮಾಡಲು ಅವರಿಗೆ ಹಕ್ಕಿರುವುದಿಲ್ಲ.

## v) ಷೇರುಗಳ ವರ್ಗಾವಣೆ:

ಅ. ಯಾವುದೇ ಸದಸ್ಯ ಸಂಘವು ತಾನು ಹೊಂದಿರುವ ಷೇರನ್ನು ಸದಸ್ಯತ್ವವಿಲ್ಲದ ಸಂಘಗಳಿಗೆ ಬ್ಯಾಂಕಿನ ಆಡಳಿತ ಮಂಡಳಿ ಅಥವಾ ಕಾರ್ಯನಿರ್ವಾಹಕ ಮಂಡಳಿ ಮಂಜೂರಾತಿ ನೀಡಿದ ಹೊರತು ವರ್ಗಾಯಿಸುವಂತಿಲ್ಲ. ಯಾವ ಸದಸ್ಯ ಸಂಘವು ತಾವು ಪಡೆದ ಯಾವುದೇ ಷೇರುಗಳನ್ನು ಯಾವುದೇ ಸಂದರ್ಭದಲ್ಲಿ ವಾಪಸ್ಸು ಪಡೆಯಲು ಇಚ್ಚಿಸಿದಲ್ಲಿ ನಿಬಂಧಕರು/ಸರ್ಕಾರದ ಅನುಮತಿ ಪಡೆಯತಕ್ಕದ್ದು. ಪರಂತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು ರೂಲ್ 1960 ನಂ.12ರ ಮೇರೆಗೆ ಸಂಘವು

(6)

ನಡೆದಿರುವ ಮತ್ತು ನಿರ್ಣಯವನ್ನು ಕೈಗೊಂಡಿರುವ ಬಗ್ಗೆ ಸಾಬೀತುಪಡಿಸುವ ಪುರಾವೆಯಾಗುತ್ತದೆ. ವಾರ್ಷಿಕ ಮಹಾಸಭೆ ಹಾಗೂ ವಿಶೇಷ ಮಹಾಸಭೆ ನೋಟಿಸಿನ ಪ್ರತಿ ಮತ್ತು ನಡವಳಿಕೆಗಳ ಪ್ರತಿಯನ್ನು ನಿಬಂಧಕರಿಗೆ ಸಭೆಯು ನಡೆದ 3 ದಿನಗಳೊಳಗಾಗಿ ಕಳುಹಿಸತಕ್ಕದ್ದು.

## 12. ಸಮ್ಮತಿ ಪತ್ರಗಳ ಮೂಲಕ ಆಡಳಿತ ಮಂಡಳಿ/ಕಾರ್ಯನಿರ್ವಾಹಕಸಮಿತಿನಿರ್ದೇಶಕರ ಒಪ್ಪಿಗೆ ಪಡೆಯುವಿಕೆ:

ಎರಡು ಆಡಳಿತ ಮಂಡಳಿ / ಕಾರ್ಯನಿರ್ವಾಹಕ ಸಮಿತಿ ಸಭೆಗಳ ಮಧ್ಯದಲ್ಲಿ ತ್ವರಿತವಾಗಿ ಕ್ರಮಕೈಗೊಳ್ಳಬೇಕಾದ ವಿಷಯಗಳಿದ್ದಂತಹ ಸಂದರ್ಭದಲ್ಲಿ ಅಂತಹ ವಿಷಯಗಳನ್ನು ಮತ್ತು ಆ ವಿಷಯಗಳ ಮೇಲೆ ಕೈಗೊಳ್ಳಬೇಕಾದ ಕರಡು ಠರಾವಿನೊಂದಿಗೆ ನಿರ್ದೇಶಕರುಗಳಿಗೆ / ಸಮಿತಿ ಸದಸ್ಯರುಗಳಿಗೆ ಅಂಚೆ ಮೂಲಕ ಇಲ್ಲವೇ ಇತರೆ ಸಾಧನಗಳ ಮೂಲಕ ಕಳುಹಿಸಿ ಅವರ ಅನುಮತಿಯನ್ನು ತೆಗೆದುಕೊಳ್ಳುವ ಅಧಿಕಾರವನ್ನು ಅಧ್ಯಕ್ಷರ ಸಮಾಲೋಚನೆಯೊಂದಿಗೆ ಅಥವಾ ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರ ಸಮಾಲೋಚನೆಯೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹೊಂದಿರುತ್ತಾರೆ. ಆದರೆ ಆಡಳಿತ ಮಂಡಳಿಯ /ಕಾರ್ಯನಿರ್ವಾಹಕ ಸಮಿತಿಯ ಎಲ್ಲಾ ನಿರ್ದೇಶಕರು ತಮ್ಮ ಅಭಿಪ್ರಾಯವನ್ನು ಚಲಾಯಿಸಲು ಸಮಂಜಸ ಅವಕಾಶವನ್ನು ನೀಡತಕ್ಕದ್ದು. ಆಡಳಿತ ಮಂಡಳಿಯ / ಕಾರ್ಯನಿರ್ವಾಹಕ ಸಮಿತಿಯ $^2/_3$ ರಷ್ಟು ನಿರ್ದೇಶಕರು ಠರಾವಿನ ಪರವಾಗಿ ಅಭಿಮತ ನೀಡಿದ್ದಲ್ಲಿ ಅಂತಹ ಠರಾವುಗಳನ್ನು ಜಾರಿಗೆ ಕೊಡಬಹುದಾಗಿದೆ. ಆದಾಗ್ಯೂ ಮುಂದಿನ ಆಡಳಿತ ಮಂಡಳಿ / ಕಾರ್ಯನಿರ್ವಾಹಕ ಸಮಿತಿಯ ಸಭೆಯಲ್ಲಿ ಅವುಗಳನ್ನು ಸಮರ್ಥನೆ/ಅನುಮೋದನೆಗಾಗಿ ಮಂಡಿಸತಕ್ಕದ್ದು.

## 13. ಆಡಳಿತ ಮಂಡಳಿಯ ಅಧಿಕಾರಗಳು ಮತ್ತು ಕರ್ತವ್ಯಗಳು :

ಬ್ಯಾಂಕಿನ ಆಡಳಿತ ಮಂಡಳಿಯು ಕಾಯಿದೆ, ನಿಯಮಗಳು ಮತ್ತು ಉಪನಿಯಮಗಳ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಂತಹ ಅಥವಾ ವಿಹಿತವಾಗಬಹುದಾದಂತಹ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಈ ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಹಾನಿಯಲ್ಲದಂತೆ ಆಡಳಿತ ಮಂಡಳಿಗೆ ಈ ಕೆಳಕಂಡ ಅಧಿಕಾರಗಳು ಮತ್ತು ಕರ್ತವ್ಯಗಳು ಇರತಕ್ಕದ್ದು.

1. ಸದಸ್ಯತ್ವ ಅರ್ಜಿಯ ವಿಲೇವಾರಿ ಮಾಡುವುದು, ನಾಮಕರಣಗಳು, ವಾಪಸ್ಸುಗಳು, ರಾಜೀನಾಮೆಗಳು ಇತ್ಯಾದಿಯು ಸೇರಿದಂತೆ ಷೇರುಗಳ ವರ್ಗಾವಣೆ ಅಥವಾ ಹಂಚಿಕೆ ಮಾಡವುದು.

   ಅ) ಸಂಪನ್ಮೂಲಗಳ ಕ್ರೋಢೀಕರಣ ಮಾಡುವುದು ಮತ್ತು ನಿಧಿಗಳ ಹೂಡಿಕೆ ಮಾಡುವುದು.

2. ಬ್ಯಾಂಕಿನ ಉದ್ದೇಶಗಳಿಗಾಗಿ ಯಾವುದೇ ವ್ಯಕ್ತಿ ಯಿಂದ ಗುತ್ತಿಗೆ ರಹಿತ ಇಲ್ಲವೇ ಗುತ್ತಿಗೆ ಮೇಲಿರುವ ಅಥವಾ ಅನ್ಯಥಾ ಯಾವುದೇ ಕಟ್ಟಡ ಇಲ್ಲವೇ ಭೂಮಿಯನ್ನು ಖರೀದಿಸುವುದು, ಭೋಗ್ಯಕ್ಕೆ ಅಥವಾ ಅನ್ಯಥ ಪಡೆಯುವುದು ಮತ್ತು ಯಾವುದೇ ಕಟ್ಟಡ ಮತ್ತು ಕಟ್ಟಡಗಳು, ಮನೆ ಅಥವಾ ಮನೆಗಳು ಅಂಗಡಿಗಳು ಅಥವಾ ಗೋದಾಮುಗಳು, ಕಛೇರಿಗಳು ಅಥವಾ ಅಧ್ಯಕ್ಷರ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ, ಪ್ರಧಾನ ವ್ಯವಸ್ಥಾಪಕರ ಅಥವಾ ಬ್ಯಾಂಕಿನ ನೌಕರಿಯಲ್ಲಿರುವ ಇತರೆ ಯಾವುದೇ ನೌಕರನ ನಿವಾಸಿಗಳನ್ನು ನಿರ್ಮಿಸವುದು ಬದಲಾವಣೆ ಮಾಡುವುದು ಅಥವಾ ಮಾರಾಟ ಮಾಡುವುದು ಮತ್ತು ಖರೀದಿಸಿದ ಭೋಗ್ಯದ ಮೇಲೆ ಪಡೆದು ನಿರ್ಮಿಸಿದ, ಕಟ್ಟಿಸಿದ ಅಂತಹ ಕಟ್ಟಡ ಅಥವಾ ಭೂಮಿಯ ಬೆಲೆಯನ್ನು ನಗದಾಗಿ ಇಲ್ಲವೇ ಬೇರೆ ರೀತಿಯಿಂದ ಕೊಡುವುದು ಬ್ಯಾಂಕಿನ ವ್ಯವಹಾರಕ್ಕೆ ಅಗತ್ಯವೆಂದು ಆಡಳಿತ ಮಂಡಳಿಗೆ ಕಂಡು ಬಂದ ಪೀಠೋಪಕರಣಗಳು ಮತ್ತು ಇತರೆ ಸಲಕರಣೆಗಳು, ಎಲ್ಲಾ ಸರಂಜಾಮುಗಳೊಂದಿಗೆ ಎಲ್ಲಾ ಮರಮುಟ್ಟುಗಳು ಮತ್ತು ಬ್ಯಾಂಕಿಂಗ್ ವ್ಯವಹಾರ, ಮನೆ, ಕಛೇರಿ, ಅಥವಾ ನಿವಾಸಗಳಿಗೆ ಅಗತ್ಯವಾದ ಇತರೆ ವಸ್ತುಗಳನ್ನು ಖರೀದಿಸುವುದು. ಬ್ಯಾಂಕಿನ ಉಪಯೋಗಕ್ಕಾಗಿ ವಾಹನಗಳನ್ನು ಖರೀದಿಸುವುದು ಮತ್ತು ಹಳೆ ವಾಹನಗಳನ್ನು ನಿಯಾಮಾನುಸಾರ. ವಿಲೇವಾರಿ ಮಾಡುವುದು.

3. ಭದ್ರತೆ ಸಹಿತ ಅಥವಾ ಭದ್ರತೆಯಿಲ್ಲದೆಯೇ ಹುಂಡಿ ವಿನಿಯಮ ಮತ್ತಿತರೆ ಪರಾಕ್ರಾಮ್ಯ ಸಂಲೇಖನಗಳು ಬರೆಯುವುದು. ಅಂಗೀಕರಿಸುವುದು, ಹಿಂಬರಹ ನೀಡುವುದು, ಪರಕ್ರಾಮ್ಯ ಮಾಡುವುದು. ಮತ್ತು ಮಾರುವುದು.

4. ಬ್ಯಾಂಕಿನ ಪರವಾಗಿ ಎಲ್ಲಾ ಬಾಡಿಗೆಗಳನ್ನು ಪಾವತಿಸುವುದು, ಅದಕ್ಕೆ ಸಂಬಂಧಿಸಿದ ಎಲ್ಲಾ ಒಪ್ಪಂದ ಒಡಂಬಡಿಕೆಯ ಮತ್ತು ಭೋಗ್ಯ ಪತ್ರದಲ್ಲಿ ಕಾಣಿಸಿದ ಕರಾರುಗಳು ಮತ್ತು ಅದರಂತೆ ವಶಕ್ಕೆ ಬಂದ ಆಸ್ತಿ ಬಗೆಗಿನ ಎಲ್ಲಾ ಷರತ್ತುಗಳನ್ನು ಜಾರಿಗೆ ತರುವುದು. 1

5. ಆಡಳಿತ ಮಂಡಳಿಯು ಅಗತ್ಯವೆಂದು ಭಾವಿಸಿದಷ್ಟು ಕಾಲದವರೆಗೆ ಪ್ರತ್ಯೇಕವಾಗಿ ಇಲ್ಲವೇ ಜಂಟಿಯಾಗಿ ಅಥವಾ ಯಾವುದೇ ಕಟ್ಟಡಗಳು. ಸರಕುಗಳು ಅಥವಾ ಇತರೆ ಆಸ್ತಿಗಳು ಅಥವಾ ನಗದು ಅಥವಾ ಚಿನ್ನಾಭರಣಗಳು ಅಥವಾ ಬ್ಯಾಂಕಿನಲ್ಲಿಡಲಾದ ಯಾವುದೇ ಭದ್ರತಾ ಪತ್ರಗಳ ಮೇಲೆ ವಿಮೆ ಮಾಡುವುದು ಮತ್ತು ಮಾಡಿಸುವುದು ಮತ್ತು ಈ ಅಧಿಕಾರದ ಮೇಲೆ ವಿಮಾ

ಪಾಲಿಸಿಗಳ ಮಾರಾಟ, ಒಬ್ಬರಿಗೆ ಒಪ್ಪಿಸುವಿಕೆ, ಬಿಟ್ಟುಕೊಡುವಿಕೆ ಅಥವಾ ಮುಕ್ತಾಯಗೊಳಿಸುವುದು.

6. ಚರಾಸ್ತಿ ಅಥವಾ ಸ್ಥಿರಾಸ್ತಿ ಅಥವಾ ಹಕ್ಕು ಪತ್ರಗಳು ಅಥವಾ ಅನ್ಯಥಾ ಆಸ್ತಿಯ ಭದ್ರತೆಯ ಮೇಲೆ ಆಡಳಿತ ಮಂಡಳಿಯು ನಿಗದಿಪಡಿಸಿರುವ ಬಡ್ಡಿ ದರದಲ್ಲಿ ಸದಸ್ಯರಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡುವುದು. ಭಾರತೀಯ ರಿಸರ್ವ್ ಬ್ಯಾಂಕ್ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ರಿಯಾಯಿತಿ ಬಡ್ಡಿ ದರದ ಮೇಲೆ ಪುನರ್ಧನ ನೀಡುವ ಕೃಷಿ ಮತ್ತು ಕೃಷಿಯೇತರ ಸಾಲಗಳ ಮೇಲೆ ಸದಸ್ಯ ಸಹಕಾರ ಸಂಘಗಳಿಗೆ ವಿಧಿಸುವ ಬಡ್ಡಿ ದರದವನ್ನು ನಿಗದಿ ಪಡಿಸಲಾಗುವುದು.

7. ಬ್ಯಾಂಕಿನ ಸದಸ್ಯರುಗಳಿಗೆ ಮುಂಗಡಗಳನ್ನು ನೀಡುವುದು ಮತ್ತು ಅವರಿಗೆ ಬ್ಯಾಂಕಿನಲ್ಲಿರುವ ಅವರ ಚಾಲ್ತಿ ಖಾತೆಯ ಮೇಲೆ ಭದ್ರತೆ ಇಲ್ಲದೆಯೇ ಅಥವಾ ಮುಂಗಡ ನೀಡುವ ಕಾಲಕ್ಕೆ ಇಲ್ಲವೇ ಮೀರಲೆತ ನೀಡುವ ಕಾಲಕ್ಕೆ ಬ್ಯಾಂಕಿನಲ್ಲಿರುವ ನಿಶ್ಚಿತ ಠೇವಣಿ ಹಣಗಳ ಭದ್ರತೆಯ ಮೇಲೆ ಅಥವಾ ಭಾರತೀಯ ಟ್ರಸ್ಟ್ ಕಾಯಿದೆ 1882 ಕಲಂ 20 (ಅ)(ಆ)(ಇ) ಮತ್ತು (ಈ)ಲ್ಲಿ ನಮೂದಿಸಿದ ಭದ್ರತಾ ಪತ್ರಗಳ ಆಧಾರದ ಮೇಲೆ ಅಥವಾ ಉತ್ಪನ್ನಗಳ ಮತ್ತು ಸಣ್ಣ ಕೈಗಾರಿಕೆ ಹಾಗೂ ಗುಡಿ ಕೈಗಾರಿಕೆ, ಸಿದ್ಧ ಸರಕುಗಳು ಅಥವಾ ಚಿನ್ನ ಬೆಳ್ಳಿ ಅಭರಣಗಳ ಆಧಾರದ ಮೇಲೆ ಸಾಲ ನೀಡುವುದು.

8. ಕರ್ನಾಟಕ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಕೇಂದ್ರ ಅಥವಾ ರಾಜ್ಯ ವಿಧಾನ ಮಂಡಳಿಗಳಿಂದ ಅಂಗೀಕೃತ ಕಾಯಿದೆ ಅಥವಾ ಕೇಂದ್ರ ಇಲ್ಲವೇ ರಾಜ್ಯ ಸರ್ಕಾರದ ಆದೇಶದ ಮೇರೆಗೆ ಸ್ಥಾಪನೆಯಾದ ಯಾವುದೇ ಸಂಸ್ಥೆಗೆ ಅಥವಾ ಕರ್ನಾಟಕ ರಾಜ್ಯದಲ್ಲಿನ ಯಾವುದೇ ಬ್ಯಾಂಕಿಗೆ ಅಥವಾ ಸಾರ್ವಜನಿಕ ಟ್ರಸ್ಟ್ ಅಥವಾ ನಿಧಿಗಳಿಗೆ, ಸರ್ಕಾರಿ ಅಥವಾ ನಿಯಂತ್ರಿತ ಟ್ರಸ್ಟ್‌ಗಳಿಗೆ ಏಜೆಂಟರಾಗಿ ವರ್ತಿಸುವುದು ಮತ್ತು ಬ್ಯಾಂಕು ಮತ್ತು ಇಂತಹ ಇತರೆ ಸಂಸ್ಥೆಗಳೊಂದಿಗೆ ಪರಸ್ಪರ ಒಪ್ಪಿಕೊಂಡು ನಿಬಂಧನಗಳ ಮೇಲೆ ಮತ್ತು ಅಂತಹ ರೀತಿಯಲ್ಲಿ ಅವುಗಳಿಗೆ ಸಂಬಂಧಿಸಿದ ಯಾವುದೇ ಆಸ್ತಿಗಳನ್ನು ಅವುಗಳಿಗೆ ಹಿಂತಿರುಗಿಸುವುದು.

9. ಕಾಯಿದೆ ಅಡಿಯಲ್ಲಿ ನೊಂದಾಯಿತರಾದ ಸಹಕಾರ ಸಂಘಗಳ ಪರವಾಗಿ ಗ್ಯಾರಂಟಿ ನೀಡುವುದು. ಈ ಉಪನಿಯಮಗಳ, ಮೇರೆಗೆ ವ್ಯವಹಾರ ನಡೆಸುವುದಕ್ಕೆ ಅಗತ್ಯವಾದಂತೆ ಯಂತ್ರೋಪಕರಣಗಳು, ಕೃಷಿ ಉಪಕರಗಳು, ರಸಗೊಬ್ಬರ ಅಥವಾ ಇತರೆ ಸಲಕರಣೆಗಳ ಆಮದು ಅಥವಾ ಖರೀದಿಗೆ ಭರವಸೆ ಪತ್ರ ನೀಡುವುದು ಅಥವಾ ಸಾಮಾನ್ಯವಾಗಿ ಅವರ ಪರವಾಗಿ ಬ್ಯಾಂಕರ್ಸ್ ಖಾತರಿ ನೀಡುವುದು ಮತ್ತು ಬ್ಯಾಂಕಿನ ಇತರೆ ಅಧೀನ ಸಂಸ್ಥೆಗಳು ಮತ್ತು ಠೇಣಿದಾರರ ಪರವಾಗಿ ಅಂತಹ ಖಾತರಿ ನೀಡುವುದು.

10. ಬ್ಯಾಂಕಿನ ಸದಸ್ಯತ್ವವನ್ನು ಹೊಂದಿದ ಸಹಕಾರ ಸಂಘಗಳಿಗೆ ಅವು ತಮ್ಮ ಸದಸ್ಯರಿಗೆ ನೀಡಿದ ಮುಂಗಡಗಳ ಸಂಬಂಧದಲ್ಲಿ ಅಥವಾ ಸರ್ಕಾರ ಅಥವಾ ಇತರೆ ಯಾವುದೇ ಸಂಸ್ಥೆಗಳಿಂದ ನೀಡಲ್ಪಟ್ಟ ಸಾಲಗಳಿಗೆ ಈ ಸಂಬಂಧವಾಗಿ ವಿಧಿಸಲ್ಪಟ್ಟ ಷರತ್ತುಗಳು ಮತ್ತು ಅವುಗಳ ಮೇಲೆ ಕಮೀಷನ್ ವಿಧಿಸುವುದಕ್ಕೆ ಒಳಪಟ್ಟು ಖಾತರಿ ನೀಡುವುದು.

11. ಬ್ಯಾಂಕಿನ ನೌಕರರ ಉಪಯೋಗಕ್ಕಾಗಿ ಸೃಷ್ಟಿಸಿದ ನಿಧಿಗಳ ಸ್ಥಾಪನೆಯಲ್ಲಿ ಬೆಂಬಲಿಸುವುದು ಅಥವಾ ನೆರವಾಗುವುದು.

12. ಬ್ಯಾಂಕಿನ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದ ಸಾಲ ಹಾಗೂ ಮುಂಗಡಗಳನ್ನು ಪಡೆಯುವುದು ಮತ್ತು ನಿಹಿತವಾದ ಎಲ್ಲಾ ಡಿ.ಡಿ.ಗಳು, ಕರಾರು ಪತ್ರಗಳು, ರಸೀದಿಗಳು ಮತ್ತಿತರೆ ದಸ್ತಾವೇಜುಗಳನ್ನು ಬರೆದು ಕೊಡುವುದು.

13. ಬ್ಯಾಂಕು ಅಥವಾ ಅದರ ಅಧಿಕಾರಿಗಳು, ಅಥವಾ ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದ ಇತರೆಯವರ ಪರವಾಗಿ ಅಥವಾ ವಿರೋಧವಾಗಿ ಕಾಯಿದೆ ಕ್ರಮಗಳನ್ನು ಮಾಡುವುದು, ನಡೆಸುವುದು, ಸಮರ್ಥನೆ ಮಾಡಿಕೊಳ್ಳುವುದು ಒಡಂಬಡಿಕೆ, ಮಾಡಿಕೊಳ್ಳುವುದು ಅಥವಾ ಕೈ ಬಿಡುವುದು ಅಲ್ಲದೆ ಬ್ಯಾಂಕಿಗೆ ಬರಬೇಕಾದ ಸಾಲ ಮತ್ತು ಯಾವುದೇ ಹಕ್ಕುಗಳು ಅಥವಾ ಬೇಡಿಕೆಗಳ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳುವುದು ಅಥವಾ ಹಣ ಪಾವತಿಗೆ ಸಮಯ ನೀಡುವುದು ಮತ್ತು ಬ್ಯಾಂಕಿನಿಂದ ಅಥವಾ ಬ್ಯಾಂಕಿನ ವಿರೋಧವಾದ ಯಾವುದೇ ಕ್ಲೇಮುಗಳನ್ನು ಪಂಚಾಯಿತಿಗೆ ಒಪ್ಪಿಸುವುದು.

14. ರೈತರಿಗೆ ಸಾಲದ ವ್ಯವಸ್ಥೆ ಏರ್ಪಡಿಸುವುದು ಮತ್ತು ಸಹಕಾರ ಸಂಘಗಳ ಮೂಲಕ ಕೃಷಿ ಮಾರಾಟ ಮತ್ತು ಸಂಸ್ಕರಣ ಚಟುವಟಿಕೆಗಳಿಗಾಗಿ ಸಾಲ ಒದಗಿಸುವಲ್ಲಿ ಸಾಮಾನ್ಯವಾಗಿ ಜಿಲ್ಲಾ ಮಟ್ಟದ ಸಂಯೋಜಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು, ಸಹಕಾರಿ ಸಾಲ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಜಿಲ್ಲೆಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಇತರೆ ಸಂಘಗಳ ಮೂಲಕ ದಕ್ಷತೆಯಿಂದ ನಿರ್ವಹಣೆಯಾಗುವುದುನ್ನು ಖಚಿತ ಮಾಡುವುದು ಅಥವಾ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು ಸದಸ್ಯರಿಗೆ ಅಗತ್ಯವಾದ ಸೌಲಭ್ಯ ನೀಡುವಲ್ಲಿ ಅವುಗಳಿಗೆ ಸಾಧ್ಯವಿಲ್ಲದ ಕಡೆಗಳಿಗೆ ಬ್ಯಾಂಕಿನಿಂದ ನೇರವಾಗಿ ಸಾಲ ಸೌಲಭ್ಯ ಒದಗಿಸುವುದು.

15. ಸಹಕಾರಿ ಪತ್ತಿನ ಸಂಘಟನೆಯ ಸಮಗ್ರ ವ್ಯವಸ್ಥೆಯ ನಿಶ್ಚಯ ಮತ್ತು ಖಚಿತತೆ ಸಲುವಾಗಿ ತನಗೆ ಋಣಿಯಾಗುವಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸದಸ್ಯ ಸಹಕಾರ ಸಂಘಗಳ ಮತ್ತು ಕೃಷಿಕರಿಗೆ ಸಾಲದ ಅವಕಾಶಕ್ಕೆ ಸಂಬಂಧಿಸಿದ ಇತರೆ ಸದಸ್ಯ ಸಹಕಾರ ಸಂಘಗಳ ಕಾರ್ಯ ನಿರ್ವಹಣೆಯನ್ನು ಪರಿವೀಕ್ಷಣೆ ಮಾಡುವುದು, ಉಸ್ತುವಾರಿ ಮಾಡುವುದು ಮತ್ತು ಅವಲೋಕಿಸುವುದು ಮತ್ತು ರಾಜ್ಯದಲ್ಲಿನ ಕೃಷಿಕರಿಗೆ ಕೃಷಿ ಮಾರಾಟ ಮತ್ತು ಸಂಸ್ಕರಣೆಗೆ ಪತ್ತಿನ ಅವಕಾಶಕ್ಕಾಗಿ ಹಾಗೂ ಅವರಿಗೆ ನೀಡಿದ ಹಣದ ಸುರಕ್ಷತೆ ಖಚಿತತೆಗಾಗಿ ಒಂದು ಏಕರೂಪದ ನೀತಿಯನ್ನು ರೂಪಿಸುವುದು.

16. ಉಯಿಲಿನ ಜಾರಿದಾರರಾಗಿ ಕೆಲಸ ನಿರ್ವಹಿಸುವುದು, ಉಯಿಲಿನ ಮೇರೆಗೆ ಟ್ರಸ್ಟಿಯಾಗುವುದು, ಇತ್ಯರ್ಥದ ಟ್ರಸ್ಟಿಯಾಗುವುದು, ಸಾರ್ವಜನಿಕ ಟ್ರಸ್ಟಿ, ಧಾರ್ಮಿಕ ದತ್ತಿ ಅಥವಾ ಇತರೆ ಟ್ರಸ್ಟ್‌ಗಳ ಟ್ರಸ್ಟಿಯಾಗುವುದು, ಅಪ್ರಾಪ್ತ ವಯಸ್ಕರ ಪಿತ್ರಾರ್ಜಿತ ಆಸ್ತಿಯ ಟ್ರಸ್ಟಿಯಾಗುವುದು, ಸಾಲ ಪತ್ರಧಾರಕರಟ್ರಸ್ಟಿ ಯಾಗುವುದು. ಯಾವುದೇ ವಿವರಣೆಯ ಟ್ರಸ್ಟ್‌ಗಳಡಿಯಲ್ಲಿನ ಭವಿಷ್ಯ ನಿಧಿ, ಪಿಂಚಣಿ ಮತ್ತು ಉಪದಾನ ನಿಧಿಗಳು, ಆಸ್ತಿಗಳ ಸುಪರ್ಧುದಾರ ಟ್ರಸ್ಟಿಯಾಗುವುದು, ವಿವಾಹಿತ ಮಹಿಳೆಯ ಆಸ್ತಿ ಕಾಯಿದೆ 1874ರ ಕಲಂ 6 ರಡಿಯಲ್ಲಿ ತೆಗೆದುಕೊಂಡ ಜೀವ ವಿಮಾ ಪಾಲಿಸಿಗಳ ವಿಶೇಷ ಟ್ರಸ್ಟಿಯಾಗುವುದು. ಗ್ರಾಹಕರು ಮತ್ತು ವಿಮಾ ಪಾಲಿಸಿಗಳ ಉಯಿಲುಗಳ ಸುಪರ್ದುದಾರರಾಗಿ ಕಾರ್ಯನಿರ್ವಹಿಸುವುದು.

17. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸದಸ್ಯ ಸಹಕಾರ ಸಂಘಗಳಿಂದ ನಿಯತಕಾಲಿಕ ವರದಿಗಳು ಮತ್ತು ವಿವರಣೆ ಪತ್ರಗಳನ್ನು ತರಿಸಿಕೊಳ್ಳುವುದು ಮತ್ತು ಅಂತಹ ವಿವರಣೆ ಪತ್ರಗಳ ಬಗ್ಗೆ ನಮೂನೆಗಳನ್ನು ನಿಗದಿಪಡಿಸುವುಸು.

18. ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಅಪೆಕ್ಸ್ ಬ್ಯಾಂಕಿನಿಂದ ನೀಡಲ್ಪಟ್ಟ ಮಾರ್ಗ ಸೂಚಿಗಳಿಗೊಳಪಟ್ಟು ಬ್ಯಾಂಕಿಗೆ ಕಾನೂನು ಬದ್ದವಾಗಿ ನಿರ್ದಿಷ್ಟ ಪಡಿಸಬಹುದಾದ ವ್ಯವಹಾರದ ನಿರ್ವಹಣೆಗೆ ವ್ಯವಸ್ಥೆ ಮಾಡುವುದು.

19. ಸದಸ್ಯ ಸಹಕಾರ ಸಂಘಗಳಿಂದ ವಸೂಲಾತಿಗಳನ್ನು ಮಾಡುವ ದೃಷ್ಟಿಯಿಂದ ನಿಬಂಧಕರು ವಿಧಿಸಿದ ಷರತ್ತುಗಳ ಮೇಲೆ ಬ್ಯಾಂಕಿಗೆ ಋಣಿಯಾದ ಸದಸ್ಯ ಸಹಕಾರ ಸಂಘಗಳ ಸಮಾಪನಾ ಕಾರ್ಯವನ್ನು ಕೈಗೊಳ್ಳುವುದು.

20. ನಿಬಂಧಕರ ಅನುಮೋದನೆಗೊಳಪಟ್ಟು ಬ್ಯಾಂಕಿನ ಸದಸ್ಯರಾದ ಯಾವುದೇ ಸಹಕಾರ ಸಂಘದ ಆಡಳಿತವನ್ನು ವಹಿಸಿಕೊಳ್ಳುವುದು ಅಥವಾ ಬ್ಯಾಂಕಿನ ಅಥವಾ ಸಂಘದ ಹಿತಾಸಕ್ತಿ ಯನ್ನು ರಕ್ಷಿಸಲು ಅಗತ್ಯವಾಗಬಹುದಾದಂತಹ ಅದರ ಆಡಳಿತದಲ್ಲಿ ಭಾಗವಹಿಸುವುದು.

21. ಬ್ಯಾಂಕಿನ ಕಾರ್ಯನಿರ್ವಹಣೆಯನ್ನು ನಿರ್ವಹಿಸಲು ಅಗತ್ಯವೆಂದು ಪರಿಗಣಿಸಬಹುದಾದಂತೆ ಯಾವುದೇ ವೇಳೆಯಲ್ಲಿ ಕಾರ್ಯಕಾರಿ ಸಮಿತಿಯನ್ನು ಮತ್ತು ಉಪಸಮಿತಿಗಳನ್ನು ರಚಿಸಲು ಮತ್ತು ನಿರ್ದಿಷ್ಟ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂತಹ ಅಧಿಕಾರ ಮತ್ತು ಕರ್ತವ್ಯಗಳನ್ನು ಅದಕ್ಕೆ ನಿಯೋಜಿಸಲು ಆಡಳಿತ ಮಂಡಳಿಗೆ ಅಧಿಕಾರ ಇರುತ್ತದೆ. ಈ ಉಪ ಸಮಿತಿಗಳು ಅಧಿಕಾರ ಅವಧಿಯು ಆಡಳಿತ ಮಂಡಳಿಯ ಅವಧಿಗೆ ಸಹ ವ್ಯಾಪ್ತವಾಗಿರುತ್ತದೆ.

22. ಸುಸ್ತಿ ಸಾಲಗಳ ಪರಿಶೀಲನೆ ಹಾಗೂ ವಸೂಲಾತಿಯಲ್ಲಿ ನಿರ್ದೇಶಕರ ಭಾಗವಹಿಸುವಿಕೆ.

23. ಅಭಿವೃದ್ಧಿಯ ಯೋಜನೆ ಪರಾಮರ್ಶೆ ಹಾಗೂ ಅನುಷ್ಠಾನ

24. ಬ್ಯಾಂಕಿನ ವ್ಯವಹಾರ ವ್ಯವಸ್ಥಾಪನೆಯ ದೃಷ್ಟಿಯಿಂದ ನಬಾರ್ಡ್‌ನ ನಿರ್ದೇಶನದಂತೆ ಕಾಲಕಾಲಕ್ಕೆ ಯಾವುದೇ ಅಧಿಕಾರಿ ಅಥವಾ ನೌಕರರನ್ನು ನೇಮಕ ಮಾಡುವುದು ಆಡಳಿತ ಮಂಡಳಿಯು ಯೋಗ್ಯವೆಂದು ಭಾವಿಸಿದಂತೆ ಅವನನ್ನು ಕೆಲಸದಿಂದ ತೆಗೆದು ಹಾಕುವುದು ಅಥವಾ ಅಮಾನತ್ತಿನಲ್ಲಿಡುವುದು ಅಥವಾ ಅನ್ಯಥಾ ಶಿಕ್ಷೆ ವಿಧಿಸುವುದು ಅಥವಾ ಬ್ಯಾಂಕಿನ ಯಾವುದೇ ಅಧಿಕಾರಿ ಅಥವಾ ನೌಕರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು. ಅವರ ಸಂಭಾವನೆ, ವೇತನವನ್ನು ನಿಗದಿಪಡಿಸುವುದು ಮತ್ತು ಆಡಳಿತ ಮಂಡಳಿಯು ಅಗತ್ಯವೆಂದು ಭಾವಿಸಬಹುದಾದ ಸಂಭಾವನೆಯ ಮೇಲೆ ಅಂತಹ ಸಿಬ್ಬಂದಿಯನ್ನು ನೇಮಕ ಮಾಡುವುದು ಮತ್ತು ನೇಮಕಾತಿ, ಪದೋನ್ನತಿ ಬಗ್ಗೆ ಅರ್ಹತೆಗಳನ್ನು ಮತ್ತು ಸಿಬ್ಬಂದಿ ಸೇವಾ ನಿಯಮ ರೂಪಿಸುವುದು, ಬ್ಯಾಂಕಿನ ಸಿಬ್ಬಂದಿ ಬಲ ಮತ್ತು ಪ್ರತಿಯೊಬ್ಬ ನೌಕರನಿಗೂ ವೇತನ ಶ್ರೇಣಿ, ಭವಿಷ್ಯ ನಿಧಿ, ಆರೋಗ್ಯ ವಿಮೆ, ಸ್ವಯಂ ನಿವೃತ್ತಿ ಯೋಜನೆ ಜಾರಿಗೊಳಿಸುವುದು ಮತ್ತು ಇತರೇ ಭತ್ಯೆಗಳನ್ನು ಆಯವ್ಯಯದ ಹಂಚಿಕೆಯೊಳಗೆ ನಿಗದಿಪಡಿಸುವುದು.

**ನೇಮಕಾತಿಯ ನಿಯಮಗಳು :**

1. ಲಿಖಿತ ಪರೀಕ್ಷೆಯನ್ನು ಶೇ. 85ಕ್ಕೆ ಕಡಿಮೆ ಇಲ್ಲದಂತೆ 1:20ರ ಅನುಪಾತದಲ್ಲಿ ಹಾಗೂ ಮೌಖಿಕ ಪರೀಕ್ಷೆಯನ್ನು ಶೇ. 15ಕ್ಕೆ ಮೀರದಂತೆ 1:5ರ ಅನುಪಾತದಲ್ಲಿ ಕೈಗೊಳ್ಳುವುದು.
2. ಲಿಖಿತ ಪರೀಕ್ಷೆ ಇಲ್ಲದಿದ್ದಲ್ಲಿ ಪದವಿಯಲ್ಲಿ ಗಳಿಸಿದ ಅಂಕಗಳಿಗೆ ಶೇ. 85ಕ್ಕೆ ಮಿತಿಗೊಳಿಸಿ ಮೌಖಿಕ ಪರೀಕ್ಷೆಯನ್ನು ಶೇ. 15ಕ್ಕೆ ಮಿತಿಗೊಳಿಸಿ ನೇಮಕಾತಿ ಮಾಡಿಕೊಳ್ಳತಕ್ಕದ್ದು.
3. ಮೀಸಲಾತಿ ನಿಯಮಗಳನ್ನು ಸಹಕಾರ ಸಂಘಗಳಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಪಾಲಿಸತಕ್ಕದ್ದು.
4. ನೇಮಕಾತಿಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸುವುದು.
5. ಅವಶ್ಯಕ ನಿಯಮಗಳನ್ನು ಆಡಳಿತ ಮಂಡಳಿಯು ಕಾಲಕಾಲಕ್ಕೆ ರೂಪಿಸಿಕೊಳ್ಳುವುದು.

(1)

...ಕಿನ ಪ್ರತಿ ಸದಸ್ಯನು ತನ್ನ ದೈನಂದಿನ ವ್ಯವಹಾರದಲ್ಲಿ ಬ್ಯಾಂಕು ನಿರ್ವಹಿಸುವ ಪುಸ್ತಕಗಳನ್ನು, ಲೆಕ್ಕಗಳನ್ನು ಮತ್ತು ಮಾಹಿತಿಯನ್ನು ...ಡಲು ಹಾಗೂ ತತ್ಸಬಂಧದ ಮಾಹಿತಿಯನ್ನು ಮತ್ತು ಲೆಕ್ಕಗಳನ್ನು ಪಡೆಯಲು ಅವಕಾಶ ಹೊಂದಿರತಕ್ಕದ್ದು.

---------

ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ

(ಎಂ.ಜಿ. ರಾಜು)
ನಿರ್ದೇಶಕರು

(ಕೆ.ಎ. ಇಂದ್ರೇಶ್)
ನಿರ್ದೇಶಕರು

Chief Executive Officer
Hassan District Central Co-operative
Bank Ltd, " Unnathi "
B. M. Road, HASSAN

ಅಧ್ಯಕ್ಷರು,
ಹೆಚ್.ಡಿ.ಸಿ.ಸಿ. ಬ್ಯಾಂಕ್ ನಿ.
ಹಾಸನ.

ಈ ಕಛೇರಿಯ ಆದೇಶದ ಸಂಖ್ಯೆ: ಜೆಆರ್‌ಎಂ/ಬಿಎಸ್-7/ಬಿ.ಎಂ.ಡಿ/180/2013-14 ದಿ: 30-10-2013 ರ ಆಜ್ಞಾನುಸಾರ ಸಮಗ್ರ ಬೈಲಾ ತಿದ್ದುಪಡಿ ಸಂಖ್ಯೆ 1 ರಿಂದ 22 ರವರೆಗೆ ಅನುಮೋದಿಸಿ ನೋಂದಾಯಿಸಲಾಗಿದೆ..

ಸಹಕಾರ ಸಂಘಗಳ ಜಂಟಿ ನಿಬಂಧಕರು
ಮೈಸೂರು ಪ್ರಾಂತ, ಮೈಸೂರು

(10)

ಅನುಬಂಧ-5

ಬ್ಯಾಂಕಿನ ಬೈಲಾವನ್ನು ದಿನಾಂಕ 21-09-2018 ರ ಸರ್ವ ಸದಸ್ಯರ ಸಭೆಯಲ್ಲಿ ತಿದ್ದುಪಡಿ ಮಾಡಿ ಅನುಮೋದಿಸಲಾಗಿರುತ್ತದೆ.

| ಕ್ರ.ಸಂ. | ಉಪ ನಿಯಮಗಳ ಸಂಖ್ಯೆ | ತಿದ್ದುಪಡಿ ನಂತರ ಇರಬೇಕಾದ ನಿಯಮ |
|---|---|---|
| 1 | 4. i) ಇ | 'ಬಿ' ವರ್ಗದ ಷೇರುಗಳು ಪ್ರತಿಯೊಂದು ಷೇರಿಗೆ ರೂ. 10,000-00 ಇರತಕ್ಕದ್ದು. |
| | 4. ii) ಆ. | **ಸದಸ್ಯತ್ವ:**<br>ಆ. ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಲು ಸಹಕಾರ ಸಂಘವು ಪ್ರತಿ ಷೇರಿಗೆ ರೂ. 10,000-00 ಷೇರು ಧನವನ್ನು ಸಂಘದ ಆಡಳಿತ ಮಂಡಳಿಯ ತೀರ್ಮಾನದೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಆಡಳಿತ ಸಮಿತಿಯು ಈ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಅರ್ಜಿಯ ನಮೂನೆಯನ್ನು ನಿಗದಿಗೊಳಿಸಬಹುದು ಮತ್ತು ಸದಸ್ಯತ್ವದ ಅರ್ಜಿಯನ್ನು ತನ್ನ ವಿವೇಚನೆಗೆ ಒಳಪಟ್ಟು ಮಂಜೂರು ಮಾಡಬಹುದು ಅಥವಾ ತಿರಸ್ಕರಿಸಬಹುದು. |
| | 4. vi) | **ಬ್ಯಾಂಕಿನ ವ್ಯವಸ್ಥಾಪನೆಯಲ್ಲಿ ಸದಸ್ಯರ ಭಾಗವಹಿಸುವಿಕೆ ಬ್ಯಾಂಕಿನ ಪ್ರತಿ ಸದಸ್ಯ ಸಹಕಾರ ಸಂಘವು ಕನಿಷ್ಟ.**<br>i) ಹಿಂದಿನ 5 ವಾರ್ಷಿಕ ಮಹಾ ಸಭೆಗಳಲ್ಲಿ 3 ಮಹಾಸಭೆಗಳಿಗೆ ಹಾಜರಾಗುವುದರ ಮೂಲಕ<br>ii) ಸದಸ್ಯ ಸಂಘವು 5 ವರ್ಷಗಳಲ್ಲಿ ಕನಿಷ್ಠ 1 ವರ್ಷಗಳ ಪೂರ್ಣ ಅವಧಿಗೆ ಕನಿಷ್ಟ ರೂ. 50,000-00 ಗಳನ್ನು ಚಾಲ್ತಿ/ಉಳಿತಾಯ ಖಾತೆಯಲ್ಲಿ ಅಥವಾ ಠೇವಣಿ ಮಾಡುವುದರ ಮೂಲಕ ಸೇವೆ/ಸೌಲಭ್ಯಗಳನ್ನು ಬಳಸಿಕೊಳ್ಳುವುದರ ಮೂಲಕ ಬ್ಯಾಂಕಿನ ವ್ಯವಸ್ಥಾಪನೆಯಲ್ಲಿ ಭಾಗವಹಿಸತಕ್ಕದ್ದು.<br>ತಪ್ಪಿದರೆ, ಅಂತಹ ಸದಸ್ಯ ಸಂಘವು 3 ವರ್ಷಗಳ ಅವಧಿಗೆ ಸರ್ವ ಸದಸ್ಯರ ಸಭೆ ಅಥವಾ ಮಂಡಳಿಯ ಸದಸ್ಯ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. |

ನಿರ್ದೇಶಕರು ಹಾಜಿಸಕೇಬ್ಯಾಂಕ್ ನಿ., | ನಿರ್ದೇಶಕರು ಹಾಜಿಸಕೇಬ್ಯಾಂಕ್ ನಿ. | ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಜಿಸಕೇಬ್ಯಾಂಕ್ ನಿ | ಅಧ್ಯಕ್ಷರು ಹಾಜಿಸಕೇಬ್ಯಾಂಕ್ ನಿ

ಈ ಕಛೇರಿಯ ಆದೇಶದ ಸಂಖ್ಯೆ:: ಜೆಆರ್‌ಎಂ/ಆಡಳಿತ/ಎ-1/ಹೆಚ್‌ಬಿಟಿ/ಸಿಆರ್01/2019-20, ದಿ:02.04.2019 ರಂತೆ ಬ್ಯಾಂಕಿನ ಬೈಲಾ ಸಂಖ್ಯೆ 4 i)ಎ, 4 ii)ಆ, 4 vi) ಗಳ ತಿದ್ದುಪಡಿಗಳನ್ನು ಅನುಮೋದಿಸಿದೆ. ಬ್ಯಾಂಕಿನ ಯಾವುದೇ ಉಪನಿಯಮಗಳ ಅವಕಾಶಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ತಿದ್ದುಪಡಿ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಹಾಗೂ ಸರ್ಕಾರದ 30 ಬಿ ರ ನಿರ್ದೇಶನಗಳಿಗೆ ವ್ಯತಿರಿಕ್ತವಾಗಿದ್ದರೆ ಅಥವಾ ಅಸಂಗತವಾಗಿದ್ದರೆ ಅಂತವುಗಳು ಸದರಿ ಕಾಯ್ದೆ ಮತ್ತು ನಿಯಮಗಳನ್ವಯ ನಿಂತುಹೋಗುತ್ತದೆ ಹಾಗೂ ಜಾರಿಗೊಳಿಸಲು ಬರುವುದಿಲ್ಲ.

ಸಹಕಾರ ಸಂಘಗಳ ಜಂಟಿ ನಿಬಂಧಕರು,
ಮೈಸೂರು ಪ್ರಾಂತ, ಮೈಸೂರು.

/Ra/Office Procedings/OP/2015-16